# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಆಗಸ್ಟ್ 26, 2021

ಸಂಪುಟ : 48 ಸಂಚಿಕೆ : 104 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ದೇವರಮನಿ ದೂಡಾ ಅಧ್ಯಕ್ಷ



ದಾವಣಗೆರೆ, ಆ. 25- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ದೇವರಮನಿ ಶಿವಕುಮಾರ್ ಅವರನ್ನು ನೇಮಕ ಮಾಡಿ ಸರ್ಕಾರ ಇಂದು ಆದೇಶ ಹೊರಡಿಸಿದೆ.

ಸ್ಥಳೀಯ ಮಾರುತಿರಾವ್ ಘಾಟ್ಗೆ, ಲಕ್ಷ್ಮಣ, ಗೌರಮ್ಮ ವಿ.ಪಾಟೀಲ್, ಹರಿಹರದ ಬಾತಿ ಚಂದ್ರಶೇಖರ್ ಅವರುಗಳನ್ನು ಸದಸ್ಯರುಗಳನ್ನಾಗಿ ಸರ್ಕಾರ ನೇಮಕ ಮಾಡಿದೆ.

ನೂತನ ಅಧ್ಯಕ್ಷ ಶಿವಕುಮಾರ್ ಅವರು ನಾಳೆ ದಿನಾಂಕ 26ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಕೆಇಬಿ ವೃತ್ತದ ಡಾ.ಬಿ. ಆರ್ ಅಂಬೇಡ್ಕರ್, ಕಾಯಿಪೇಟೆಯ ಶ್ರೀ ಬಸವೇಶ್ವರ ಪುತ್ಥಳಿಗಳಿಗೆ ಮಾಲಾರ್ಪಣೆ ಮಾಡಿ, ನಗರ ದೇವತೆ ಶ್ರೀ ದುರ್ಗಾಂಬಿಕ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಶಿವಾಜಿ ವೃತ್ತದ ಶಿವಾಜಿ, ಶ್ರೀ ವೀರ ಮದಕರಿ ನಾಯಕ ವೃತ್ತದ ಶ್ರೀ ವೀರ ಮದಕರಿ ನಾಯಕ, ಸಂಗೊಳ್ಳಿ ರಾಯಣ್ಣ ವೃತ್ತದ ಶ್ರೀ ಸಂಗೊಳ್ಳಿ ರಾಯಣ್ಣ, ಶ್ರೀ ದೇವರಾಜ ಅರಸು ಅವರುಗಳ ಪುತ್ಥಳಿಗಳಿಗೆ ಮಾಲಾರ್ಪಣೆ ಮಾಡುವರು. ಅಲ್ಲಿಂದ ದೂಡಾ ಕಚೇರಿಗೆ ತೆರಳಿ, ಮಧ್ಯಾಹ್ನ 12.30ಕ್ಕೆ (5ನೇ ಪುಟಕ್ಕೆ)

## ಕಬ್ಬಿನ ಕನಿಷ್ಠ ಬೆಲೆ 5 ರೂ. ಹೆಚ್ಚಳ

ನವದೆಹಲಿ, ಆ. 25 - ಕಬ್ಬು ಬೆಳೆಗಾರರಿಗೆ ಮಿಲ್ಲುಗಳು ನೀಡುವ ಕನಿಷ್ಠ ಬೆಲೆಯನ್ನು ಕೇಂದ್ರ ಸರ್ಕಾರ ಕ್ವಿಂಟಾಲ್‌ಗೆ 5 ರೂ.ಗಳಷ್ಟು ಹೆಚ್ಚಿಸಿ 290 ರೂ.ಗಳಿಗೆ ನಿಗದಿ ಪಡಿಸಿದೆ. 2021-22ರ ಸಾಲಿಗೆ ಈ ಹೆಚ್ಚಳ ಅನ್ವಯವಾಗಲಿದೆ.

ಕಬ್ಬಿನ ಎಫ್.ಆರ್.ಪಿ. ಬೆಲೆಯನ್ನು ಹೆಚ್ಚಿಸಿದರೂ ಸಹ ಸದ್ಯಕ್ಕೆ ಸಕ್ಕರೆ ಬೆಲೆಯ ಮೇಲೆ ಯಾವುದೇ ಪರಿಣಾಮ ವಾಗುವುದಿಲ್ಲ. ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಪ್ರಸಕ್ತ 2020-21ರ ಸಾಲಿನಲ್ಲಿ ಎಫ್.ಆರ್.ಪಿ. ದರವನ್ನು ಕ್ವಿಂಟಾಲ್‌ಗೆ 285 ರೂ. ದರ ನಿಗದಿ ಪಡಿಸಲಾಗಿದೆ. ಸಂಪುಟ ಸಭೆಯ ನಂತರ ಮಾತನಾಡಿದ ಕೇಂದ್ರ ಆಹಾರ ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಪಿಯೂಶ್ ಗೋಯಲ್, ಎಫ್.ಆರ್.ಪಿ. ದರವನ್ನು ಶೇ.10ರಷ್ಟು ಹೆಚ್ಚಿಸಿ ಪ್ರತಿ ಕ್ವಿಂಟಾಲ್‌ಗೆ 290 ರೂ.ಗಳಂತೆ ನಿಗದಿ ಪಡಿಸಲಾಗಿದೆ ಎಂದಿದ್ದಾರೆ. ರೈತರ ಹಿತ ರಕ್ಷಿಸುವ ಸಲುವಾಗಿ, ಶೇ.9.5ರಷ್ಟು ಕಬ್ಬಿನ ಸಾರ ದೊರೆತ ಸಂದರ್ಭದಲ್ಲೂ ಸಹ ಯಾವುದೇ ಕಡಿತ ಮಾಡಬಾರದು ಎಂದು ಸರ್ಕಾರ ಸೂಚಿಸಿದೆ ಎಂದವರು ಹೇಳಿದ್ದಾರೆ.

# ಮಕ್ಕಳಿಗೆ ಕೊರೊನಾ ಟೆಸ್ಟ್ ಕಡ್ಡಾಯ

ಬೆಂಗಳೂರು, ಆ. 25 - ಕೊರೊನಾ ಸಂಭಾವ್ಯ ಮೂರನೇ ಅಲೆ ತಡೆಗೆ ಮುಂಜಾಗ್ರತೆ ಯಾಗಿ ಪರೀಕ್ಷಾ ಗುರಿಯನ್ನು ಹೆಚ್ಚಿಸಿರುವ ರಾಜ್ಯ ಸರ್ಕಾರ 18 ವರ್ಷದ ಕೆಳಗಿನ ಮಕ್ಕಳಿಗೂ ಪರೀಕ್ಷೆ ನಡೆಸುವಂತೆ ಜಿಲ್ಲಾಡಳಿತಕ್ಕೆ ರಾಜ್ಯ ಸರ್ಕಾರ ಸೂಚಿಸಿದೆ.

ತಜ್ಞರು ನೀಡಿರುವ ವರದಿ ಆಧಾರದ ಮೇಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂದು ಸುತ್ತೋಲೆ ಹೊರಡಿಸಿ, ಪ್ರತಿನಿತ್ಯ 1.5 ಲಕ್ಷ ಪರೀಕ್ಷೆ ನಡೆಸಬೇಕು. ಇದರಲ್ಲಿ ತಾಲ್ಲೂಕು ಕೇಂದ್ರಗಳನ್ನು ಹೊರತುಪಡಿಸಿ, ಉಳಿದ ಗ್ರಾಮೀಣ ಭಾಗದಲ್ಲಿ ಶೇ. 50 ರಷ್ಟು ಪರೀಕ್ಷೆ ಆಗಲೇಬೇಕು ಎಂದು ಹೇಳಿದೆ.

ಒಟ್ಟು ಪರೀಕ್ಷೆಯಲ್ಲಿ ಶೇ. 10 ರಷ್ಟು ಪರೀಕ್ಷೆಗಳನ್ನು ಕಡ್ಡಾಯವಾಗಿ 18 ವರ್ಷ ಕೆಳಗಿನ ಮಕ್ಕಳಿಗೆ ಮಾಡಬೇಕೆಂದು ಸೂಚಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಸೋಂಕು ಹರಡುವಿಕೆ ಮೇಲೆ ನಿಗಾ ವಹಿಸುವ ಉದ್ದೇಶದಿಂದ ಇಂತಹ ತೀರ್ಮಾನ ಕೈಗೊಳ್ಳಲಾಗಿದೆ.

ಪಾಸಿಟಿವಿಟಿ ದರ ಶೇ. 5ಕ್ಕಿಂತ ಕಡಿಮೆ ಇರುವ ಗ್ರಾಮ ಪಂಚಾಯಿತಿ, ಪಟ್ಟಣ ಪ್ರದೇಶ ಗಳಲ್ಲಿ ರೋಗ ಲಕ್ಷಣ ರಹಿತ (3ನೇ ಪುಟಕ್ಕೆ)

### ಸೆ.15ರ ಒಳಗೆ ಪಠ್ಯ ಪುಸ್ತಕ

ಬೆಂಗಳೂರು, ಆ. 25 - ರಾಜ್ಯ ಸರ್ಕಾರ ಬರುವ ಸೆಪ್ಟೆಂಬರ್ 15ರ ಒಳಗಾಗಿ ರಾಜ್ಯದ ಎಲ್ಲಾ ಶಾಲೆಗಳಿಗೆ ಪಠ್ಯ ಪುಸ್ತಕಗಳನ್ನು ತಲುಪಿಸುವ ಗುರಿಯನ್ನು ಹೊಂದಿದೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, ಈಗಾಗಲೇ ಶೇ. 50ಕ್ಕಿಂತ ಹೆಚ್ಚು ಪಠ್ಯ ಪುಸ್ತಕಗಳನ್ನು ಸರಬರಾಜು (3ನೇ ಪುಟಕ್ಕೆ)

## 2023ರ ವೇಳೆಗೆ ರೈತರ ಆದಾಯ ದ್ವಿಗುಣ: ಸಿಎಂ

ಬೆಂಗಳೂರು, ಆ. 25 - ಮುಂಬರುವ 2023ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸಲಾಗುವುದು ಎಂದು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ದೆಹಲಿ ಪ್ರವಾಸಕ್ಕೆ ತೆರಳುವ ಮುನ್ನ ಕೇಂದ್ರ ಕೃಷಿ ಸಚಿವಾಲಯ ನೀಡಿರುವ ವರದಿಯನ್ನು ಸ್ವೀಕರಿಸಿ, ನಂತರ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಕೃಷಿಕನ ಆದಾಯ ದ್ವಿಗುಣ ಗೊಳಿಸಲು ರಾಜ್ಯ ಸರ್ಕಾರ ಹತ್ತು (3ನೇ ಪುಟಕ್ಕೆ)

## ಸರ್ಕಾರಿ ಬ್ಯಾಂಕುಗಳ ನೌಕರರ ಪಿಂಚಣಿ ಹೆಚ್ಚಳ

ಮುಂಬೈ, ಆ. 25 - ಬ್ಯಾಂಕ್ ಉದ್ಯೋಗಿಗಳ ಪಿಂಚಣಿ ಅತಿ ಕಡಿಮೆ ಮಟ್ಟದಲ್ಲಿದೆ ಎಂಬುದನ್ನು ಒಪ್ಪಿಕೊಂಡಿರುವ ಕೇಂದ್ರ ಸರ್ಕಾರ, ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳ ಉದ್ಯೋಗಿಗಳ ಪಿಂಚಣಿ ಯನ್ನು ಕೊನೆ ವೇತನದ ಶೇ.30ಕ್ಕೆ ಹೆಚ್ಚಿಸುವುದಾಗಿ ಹೇಳಿದೆ.

ಇದಕ್ಕೂ ಮುಂಚೆ ಇದ್ದ (3ನೇ ಪುಟಕ್ಕೆ)

## ರೈಲ್ವೇ ಅಂಡರ್ ಪಾಸ್ ಬಳಿ ಆಟೋಮ್ಯಾಟಿಕ್ ಮೋಟಾರ್

**ಕಾಮಗಾರಿಗೆ ಚಾಲನೆ ನೀಡಿದ ಮೇಯರ್ ಎಸ್.ಟಿ. ವೀರೇಶ್**


ದಾವಣಗೆರೆ, ಆ. 25- ಮಹಾನಗರ ಪಾಲಿಕೆ ಎದುರಿನ ರೈಲ್ವೆ ಅಂಡರ್ ಪಾಸ್‌ನಲ್ಲಿ ನೀರು ನಿಂತು ನಾಗರಿಕರ ಓಡಾಟಕ್ಕೆ ಬಹಳಷ್ಟು ತೊಂದರೆ ಉಂಟಾಗುತ್ತಿದ್ದ ಹಿನ್ನೆಲೆಯಲ್ಲಿ ಸಮಸ್ಯೆ ನಿವಾರಣೆಗೆ ಮಹಾನಗರ ಪಾಲಿಕೆ ಯಿಂದ ಆಟೋಮ್ಯಾಟಿಕ್ ಮೋಟರ್ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಲಾಯಿತು.

ಬುಧವಾರ ಕಾಮಗಾರಿಗೆ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಸೇರಿದಂತೆ ಪಾಲಿಕೆ ಸದಸ್ಯರು, ಅಧಿಕಾರಿಗಳು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಮೇಯರ್ ಎಸ್.ಟಿ. ವೀರೇಶ್, ಮಳೆ ಬಂದರೆ ರೈಲ್ವೆ ಅಂಡರ್ ಬ್ರಿಡ್ಜ್ ನಲ್ಲಿ ನೀರು ನಿಂತು ಸಾರ್ವಜನಿಕರಿಗೆ ಸಾಕಷ್ಟು ತೊಂದರೆ ಆಗುತ್ತಿತ್ತು. ಇದು ದಶಕಗಳಷ್ಟು ಹಳೆ ಯದಾದ ಸಮಸ್ಯೆ ಆಗಿತ್ತು. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಕೊಳ್ಳಲು ಈ ಹಿಂದೆ ಪಾಲಿಕೆಯ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಸೇರಿದಂತೆ ಇಂಜಿನಿಯರ್‌ಗಳು ಸ್ಥಳ ಪರಿಶೀಲನೆ ನಡೆಸಿದ್ದರು.


ಈಗ ಅಂತಿಮವಾಗಿ ಇದಕ್ಕೆ ಪರಿಹಾರ ಕಂಡುಕೊಳ್ಳುತ್ತಿದ್ದೇವೆ. ಅಲ್ಲಿ ಆಟೋಮ್ಯಾಟಿಕ್ ಮೋಟರ್ ಅಳವಡಿಸಿ, ನೀರನ್ನು ಹೊರಗೆ ತೆಗೆಯುವ ಕೆಲಸ ಆಗಲಿದೆ. ಈ ಕಾಮಗಾರಿಗೆ. ಸುಮಾರು 10 ಲಕ್ಷ ರೂ. ಅಂದಾಜು ವೆಚ್ಚ ಆಗಲಿದೆ. ಅಷ್ಟೇ ಅಲ್ಲದೇ ಅಲ್ಲಿನ ಸೌಂದರ್ಯವನ್ನು ಕಾಪಾಡುವ ಕೆಲಸವನ್ನು ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ ಪ್ರಕಾಶ್, ಪಾಲಿಕೆಯ ಸದಸ್ಯರಾದ ಶಿವಪ್ರಕಾಶ್, ಶಾಂತಕುಮಾರ ಸೋಗಿ, ಶಿವನ ಗೌಡ ಪಾಟೀಲ್, ಪಾಲಿಕೆಯ ಆಯುಕ್ತ ವಿಶ್ವನಾಥ ಮುದಜ್ಜಿ ಮತ್ತಿತರರಿದ್ದರು.







# ಜಗಳೂರು ತಾಲ್ಲೂಕಿನಲ್ಲಿ ಮಹೇಶ್ ಜೋಷಿ ಪ್ರಚಾರ



ಜಗಳೂರು, ಆ.25- ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿರುವ ನಾಡೋಜ ಡಾ. ಮಹೇಶ್ ಜೋಷಿ ಅವರು ತಾಲ್ಲೂಕಿನಲ್ಲಿ ಪ್ರವಾಸ ಮಾಡಿ ಮತಯಾಚನೆ ಮಾಡಿದರು.

ಪಟ್ಟಣದ ನವಚೇತನ ಶಾಲೆಯಲ್ಲಿ ಮತಯಾಚನೆ ನಡೆಸಿ ಮಾತನಾಡಿದ ಅವರು, ಮೈಸೂರು ಸಂಸ್ಥಾನದ ಮಹಾರಾಜರ ಆಳ್ವಿಕೆ ಕಾಲದ 1915 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾಯಿತು. ಅಂದು ಮೌಲ್ಯಗಳು ಉನ್ನತ ಮಟ್ಟದಲ್ಲಿದ್ದವು. ಸರ್ ಎಂ.ವಿಶ್ವೇಶ್ವರಯ್ಯನವರು ಸಾಹಿತ್ಯವನ್ನು ಸಂಸ್ಕೃತಿ ಕಲೆಯನ್ನು ಹೇಗೆ ಉಳಿಸಿ ಬೆಳೆಸಬೇಕು ಎಂಬ ದೃಷ್ಟಿಯಿಂದ ನಿಯಮಗಳನ್ನು ಮಾಡಿದರು. ಅವು ಅಂದಿನ ಕಾಲಘಟ್ಟಕ್ಕೆ ಪ್ರಸ್ತುತವಾಗಿದ್ದವು. ಇಂದು ಮೌಲ್ಯಗಳು ಕ್ಷೀಣಿಸುತ್ತಾ ಬಂದಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸಕ್ತವಾಗಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಒಂದು ಬಾರಿ ಗೆದ್ದರೆ ಮತ್ತೊಂದು ಬಾರಿ ಸ್ಪರ್ಧಿಸುವಂತಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿದೆ. ಸದಸ್ಯತ್ವದ ಸಂಖ್ಯೆಗಳು ಹೆಚ್ಚಾದಲ್ಲಿ ಹೋಬಳಿ ಮಟ್ಟ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಒಂದೇ ಬಾರಿ ಚುನಾವಣೆ ನಡೆಸಿ, ಅಧ್ಯಕ್ಷರುಗಳ ಆಯ್ಕೆ ಮಾಡಿ, ಮತ್ತೊಮ್ಮೆ ಬೇರೆಯವರಿಗೆ ಅವಕಾಶ ನೀಡುವಂತೆ ನೂತನ ನಿಯಮಗಳನ್ನು ಜಾರಿಗೊಳಿಸಲಾಗುವುದು. ರಾಜ್ಯವ್ಯಾಪಿ ಕನ್ನಡ ಸಾಹಿತ್ಯ ಪರಿಷತ್‌ನ ನಿಬಂಧನೆಗಳಿಗನುಗುಣವಾಗಿ ನಿಯಮಗಳಲ್ಲಿ ಆಮೂಲಾಗ್ರ ಪರಿಷ್ಕರಣೆಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ನಿವೃತ್ತ ನ್ಯಾ. ಅರಳಿ ನಾಗರಾಜ್, ಕನ್ನಡ ಸಾಹಿತ್ಯ ಪರಿಷತ್‌ನ ಪದಾಧಿಕಾರಿಗಳಾದ ಸುಭಾಷ್‌ಚಂದ್ರ ಬೋಸ್, ತಿಮ್ಮರಾಜ್, ನಬಿ ಸಾಬ್, ಜ್ಞಾನ ತರಂಗಿಣಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಪಿ.ಎಸ್.ಅರವಿಂದನ್, ಸಮಾಜ ಸೇವಕ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಮುಖಂಡ ಕೆ.ಬಿ. ಕಲ್ಲೇರುದ್ರೇಶ್ ಮತ್ತಿತರರು ಉಪಸ್ಥಿತರಿದ್ದರು.

# ಶೀಘ್ರದಲ್ಲೇ 2.61 ಕೋಟಿ ರೂ. ವೆಚ್ಚದ ಸಂತೆ ಮಾರುಕಟ್ಟೆ ನಿರ್ಮಾಣ



## ಹರಪನಹಳ್ಳಿ ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್

ಹರಪನಹಳ್ಳಿ, ಆ.25- ಶೀಘ್ರದಲ್ಲೇ 2.61 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ದಿನವಹಿ ಸಂತೆ ಮಾರುಕಟ್ಟೆ ನಿರ್ಮಾಣಗೊಳ್ಳಲಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ತಿಳಿಸಿದರು.

ಪಟ್ಟಣದ ದಿನವಹಿ ಸಂತೆ ಮಾರ್ಕೆಟ್, ಬಸ್ ನಿಲ್ದಾಣ, ಸೇರಿದಂತೆ ಪ್ರಮುಖ ರಸ್ತೆ, ಬೀದಿಗಳಲ್ಲಿ ಸಂಚರಿಸಿ ಸ್ವಚ್ಛತೆಯನ್ನು ಪರಿಶೀಲಿಸಿ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಶೀಘ್ರದಲ್ಲೇ 2.61 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ದಿನವಹಿ ಸಂತೆ ಮಾರ್ಕೆಟ್ ನಿರ್ಮಾಣಗೊಳ್ಳಲಿದೆ. ಈ ಮಾರ್ಕೆಟ್ ವ್ಯಾಪಾರಸ್ಥರಿಗೆ ಹಾಗೂ ಸಾರ್ವಜನಿಕರಿಗೆ ಸಹಕಾರಿಯಾಗಲಿದ್ದು, ಸದ್ಯ ಟೆಂಡರ್ ಕರೆಯಬೇಕಿದ್ದು ಟೆಂಡರ್ ಪ್ರಕ್ರಿಯೆ ಮುಗಿದ ಬಳಿಕ ಕಾಮಗಾರಿ ಪ್ರಾರಂಭಗೊಳ್ಳಲಿದೆ ಎಂದರು.

ಇದೇ ವೇಳೆ ಬೀದಿ ಬದಿ ವ್ಯಾಪಾರಿಯೊಬ್ಬ 'ಸರ್ ಬೀದಿ ಬದಿ ವ್ಯಾಪಾರಿಗಳು ಆರ್ಥಿಕವಾಗಿ ಸಬಲರಾಗಿ ಮುಖ್ಯವಾಹಿನಿಗೆ ಬರಲೆಂದು ಪಿಎಂ ಸ್ವನಿಧಿ ಆತ್ಮ ನಿರ್ಭರ್ ಯೋಜನೆ ಅಡಿಯಲ್ಲಿ ಸರ್ಕಾರದಿಂದ ಬಡ್ಡಿ ರಹಿತವಾಗಿ 10,000 ರೂ. ಸಾಲ ನೀಡುತ್ತಿದ್ದು, ಆದರೆ ಇಲ್ಲಿನ ಕರ್ನಾಟಕ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್‌ನಲ್ಲಿ ಸಾಲ ನೀಡದೆ, ಇಲ್ಲಸಲ್ಲದ ನೆಪ ಹೇಳಿ ವಿನಾ ಕಾರಣ ಸತಾಯಿಸುತ್ತಿದ್ದಾರೆ. ನಾವುಗಳು ಅಲೆದಾಡಿ, ಅಲೆದಾಡಿ ಬೇಸತ್ತಿದ್ದೇವೆ' ಎಂದು ತಮ್ಮ ಅಳಲನ್ನು ತೋಡಿಕೊಂಡರು. ಆಗ ಶಿವಕುಮಾರ್ ಅವರು ನಾನೇ ಬ್ಯಾಂಕ್‌ಗಳಿಗೆ ಖುದ್ದಾಗಿ ತೆರಳಿ ಬ್ಯಾಂಕ್ ವ್ಯವಸ್ಥಾಪಕರ ಜೊತೆ ಚರ್ಚಿಸಿ ನಿಮ್ಮ ಸಮಸ್ಯೆ ಬಗೆಹರಿಸಿ ಕೊಡುವುದಾಗಿ ಭರವಸೆ ನೀಡಿದರು.

ಪಟ್ಟಣದ 27 ವಾರ್ಡ್‌ಗಳಲ್ಲಿ ಕಸ ವಿಲೇವಾರಿ ಮಾಡಲು ಎರಡು ಹೊಸ ವಾಹನಗಳು ಬಂದಿದ್ದು, ಪ್ರತಿನಿತ್ಯ ಕಸದ ವಾಹನಗಳು ನಿಮ್ಮ ಮನೆಬಾಗಿಲಿಗೆ ಬರುತ್ತದೆ. ಕಸವನ್ನು ಪುರಸಭೆ ಗಾಡಿಗಳಿಗೆ ನೀಡಿ ಸಹಕರಿಸಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಪಟ್ಟಣದ ಬ್ರೂಸ್ ಪೇಟೆ, ಮಟ್ಟೇರ ಓಣಿ, ಮೇಗಳಪೇಟೆಗಳಲ್ಲಿ ಬೀದಿ ಹಸುಗಳು ಮತ್ತು ನಾಯಿಗಳ, ಕೋತಿಗಳ ಉಪಟಳದ ಹಿನ್ನೆಲೆಯಲ್ಲಿ ಬೀದಿ ಹಸುಗಳು ಮತ್ತು ನಾಯಿಗಳನ್ನು, ಕೋತಿಗಳನ್ನು ಹಿಡಿಯುವವರನ್ನು ಕರೆಸಿ ಬೇರೆಡೆಗೆ ಸಾಗಿಸಲಾಗುವುದು ಎಂದರು.

ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಬಿ. ಮಂಜುನಾಥ್, ಬೀದಿ ಬದಿ ವ್ಯಾಪಾರಿ ಸಂಘದ ಅಧ್ಯಕ್ಷ ಜಂಗ್ಲಿ ಅಂಜಿನಪ್ಪ, ಸದಸ್ಯರಾದ ಎಚ್. ಅಶೋಕ್, ಎಂ. ತಿರುಪತಿ ಸೇರಿದಂತೆ ಇತರೆ ಬೀದಿ ಬದಿಯ ವ್ಯಾಪಾರಿಗಳು ಇದ್ದರು.

# ಅಮೆರಿಕದಲ್ಲಿ ಭಾರತೀಯ ಮೂಲದವರ ಆದಾಯ ಹೆಚ್ಚು



ವಾಷಿಂಗ್ಟನ್, ಆ. 25 - ಅಮೆರಿಕದಲ್ಲಿ ಭಾರತೀಯ ಮೂಲದವರ ತಲಾ ಗೃಹ ಆದಾಯ 1,23,700 ಡಾಲರ್ ಆಗಿದೆ. ಶೇ.79ರಷ್ಟು ಕುಟುಂಬದವರು ಪದವೀಧರರನ್ನು ಹೊಂದಿದ್ದಾರೆ. ಇದು ಅಮೆರಿಕದ ಸರಾಸರಿಗಿಂತ ಹೆಚ್ಚಾಗಿದೆ ಎಂದು ಇತ್ತೀಚಿನ ಜನಗಣತಿ ತಿಳಿಸಿದೆ.

ಕಳೆದ ಮೂರು ದಶಕಗಳಲ್ಲಿ ಅಮೆರಿಕದಲ್ಲಿ ಏಷಿಯನ್ನರೆಂದು ಗುರುತಿಸಿಕೊಳ್ಳುವವರ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿದೆ. ಏಷಿಯನ್ನರು ಈಗ ಅತಿ ವೇಗವಾಗಿ ಬೆಳೆಯುತ್ತಿರುವ ನಾಲ್ಕು ಗುಂಪುಗಳಲ್ಲಿ ಒಂದಾಗಿದ್ದಾರೆ ಎಂದು ಜನಗಣತಿ ಮಾಹಿತಿ ತಿಳಿಸಿದೆ.

ಪ್ರಸಕ್ತ ಅಮೆರಿಕದಲ್ಲಿ 40 ಲಕ್ಷ ಭಾರತ ಮೂಲದವರು ನೆಲೆಸಿದ್ದಾರೆ. ಇವರಲ್ಲಿ 16 ಲಕ್ಷ ವೀಸಾ ಹೊಂದಿರುವವರು ಹಾಗೂ 14 ಲಕ್ಷ ಜನ ನಿವಾಸತ್ವ ಪಡೆದುಕೊಂಡವರು ಮತ್ತು 10 ಲಕ್ಷ ಜನ ಅಮೆರಿಕದಲ್ಲಿ ಹುಟ್ಟಿದವರು.

ಭಾರತೀಯ ಮೂಲದ ಕುಟುಂಬದವರ ತಲಾ ವರಮಾನ 1,23,700 ಡಾಲರ್ ಆಗಿದೆ. ಅಮೆರಿಕದ ಕುಟುಂಬಗಳ ತಲಾ ವರಮಾನ 63,922 ಕೋಟಿ ರೂ. ಆಗಿದೆ. ಅಮೆರಿಕದ ಸರಾಸರಿ ಪದವೀಧರರ ಸಂಖ್ಯೆ ಶೇ.34 ಆಗಿದೆ.

ಏಷಿಯಾದ ಇತರೆ ದೇಶಗಳ ಮೂಲದವರಿಗಿಂತ ಭಾರತೀಯರು ಹೆಚ್ಚು ಆದಾಯ ಹೊಂದಿದ್ದಾರೆ. ತೈವಾನ್ ಮೂಲದವರ ಆದಾಯ 97,129 ಡಾಲರ್ ಆಗಿದ್ದರೆ, ಫಿಲಿಪಿನೋಸ್‌ಗಳ ಆದಾಯ 95 ಸಾವಿರ ಡಾಲರ್ ಆಗಿದೆ.

ಶೇ.14ರಷ್ಟು ಭಾರತೀಯರ ಮಾತ್ರ ವರ್ಷಕ್ಕೆ 40 ಸಾವಿರ ಡಾಲರ್‌ಗಳಿಗಿಂತ ಕಡಿಮೆ ಇದೆ. ಭಾರತೀಯ ಮೂಲವದರು ಉನ್ನತ ವಲಯದ ಕೆಲಸಗಳಲ್ಲಿ ಗಣನೀಯ ಪಾಲು ಹೊಂದಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

# ಓದುಗರಿಂದ ದೂರ ಉಳಿದಿರುವ ಗ್ರಂಥಾಲಯ



## ಮಲೇಬೆನ್ನೂರು

ಮಲೇಬೆನ್ನೂರು, ಆ.25- ಪಟ್ಟಣದ ಮುಖ್ಯ ವೃತ್ತದಲ್ಲಿರುವ ಸಾರ್ವಜನಿಕ ಗ್ರಂಥಾಲಯ ನಿರ್ಲಕ್ಷ್ಯಕ್ಕೊಳಗಾಗಿದ್ದು, ಸುಸಜ್ಜಿತ ಕಟ್ಟಡ ಇಲ್ಲದ ಕಾರಣ ಓದುಗರು ಗ್ರಂಥಾಲಯದಿಂದ ದೂರ ಉಳಿದಿದ್ದಾರೆ.

ಮೈಸೂರು ರಾಜ್ಯ ಇದ್ದಾಗ 1941 ರಲ್ಲಿ ನಿರ್ಮಿಸಿರುವ ಮಲೇಬೆನ್ನೂರು ಕಾರ್ಯನಿರ್ವಹಿಸುತ್ತಿದ್ದು, ಕಟ್ಟಡದ ಒಳಗಡೆ ಕನಿಷ್ಠ ಜಾಗ ಇಲ್ಲದಿರುವುದರಿಂದ ಕುರ್ಚಿ, ಟೇಬಲ್‌ಗಳಿಂದಲೇ ಭರ್ತಿಯಾಗಿದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ಓದುಗರಿಗೆ ಒಳ್ಳೆ ಒಳ್ಳೆಯ ಪುಸ್ತಕಗಳು ಬಂದಿದ್ದು, ಅವುಗಳನ್ನು ಇಡಲು ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಚೀಲದಲ್ಲೇ ಉಳಿದಿವೆ. ಅಲ್ಲದೆ, ಈ ಕಟ್ಟಡ ತಗ್ಗಿನಲ್ಲಿರುವುದರಿಂದ ಮಳೆಗಾಲದಲ್ಲಿ ಮಳೆ ನೀರು ಕಟ್ಟಡದ ಒಳಗೆ ನುಗ್ಗುತ್ತದೆ. ಈ ವೇಳೆ ಪತ್ರಿಕೆಗಳನ್ನು ಓದುವವರು ಸಹ ಒಳಗಡೆ ಹೋಗುವುದಕ್ಕೆ ಆಗುವುದಿಲ್ಲ.

ಮಲೇಬೆನ್ನೂರು ಪಟ್ಟಣ ಪುರಸಭೆ ಆಗಿ 6 ವರ್ಷ ಕಳೆದಿದ್ದರೂ ಗ್ರಂಥಾಲಯಕ್ಕೆ ಒಂದು ಸುಸಜ್ಜಿತ ಕಟ್ಟಡ ನಿರ್ಮಿಸದಿರುವುದು ಬೇಸರದ ಸಂಗತಿ ಎಂದು ಕನ್ನಡ ಸಂಘದ ಜ್ಯೋತಿ ನಾಗಭೂಷಣ್, ಲಿಂಗೇಶ್ವರ ಮೆಡಿಕಲ್ಸ್‌ನ ಎನ್.ಕೆ. ರಾಜೀವ್ ಹೇಳಿದರು.

ಸ್ಥಳೀಯ ಶಾಸಕರಾಗಲೀ, ಸಂಸದರಾಗಲೀ ಅಥವಾ ಪುರಸಭೆಯವರಾಗಲೀ ಈ ಬಗ್ಗೆ ಕೂಡಲೇ ಗಮನ ಹರಿಸಿ, ಈಗಿರುವ ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ನಿರ್ಮಿಸುವ ಮೂಲಕ ಪಟ್ಟಣದ ಓದುಗರಿಗೆ ಗ್ರಂಥಾಲಯದ ಅಭಿರುಚಿ ಬೆಳೆಸಬೇಕೆಂದು ಅವರು ಮನವಿ ಮಾಡಿದ್ದಾರೆ.

# ಸಾರಥಿಯಲ್ಲಿ ಸಸಿ ವಿತರಣೆ



ಹರಿಹರ, ಆ.25- ತಾಲ್ಲೂಕಿನ ಸಾರಥಿ ಗ್ರಾಮದ ಹಿರಿಯ ವಿದ್ಯಾರ್ಥಿಗಳ ಬಳಗದ ವತಿಯಿಂದ 300 ಹೂವಿನ ಮತ್ತು ಹಣ್ಣಿನ ಗಿಡಗಳನ್ನು ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಊರಿನ ಗ್ರಾಮಸ್ಥರು, ಹಿರಿಯ ವಿದ್ಯಾರ್ಥಿಗಳು ಮತ್ತು ಉಚಿತ ಗಿಡಗಳ ಪ್ರಾಯೋಜಕರಾದ ವೈ. ರುದ್ರಪ್ಪ, ಮಿಲಿಟರಿ ಬಸವರಾಜ್, ರಾಘವೇಂದ್ರ ಎಳೆಹೊಳೆ, ಜಗದೀಶ್ ಮರಿಗೌಡರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಚಾರ ಉಸ್ತುವಾರಿ ಚಂದ್ರಪ್ಪ ದುರ್ಗದ, ವೈ.ಹೆಚ್. ಸಂತೋಷ್, ಪರಶುರಾಮ ಕಜ್ರಿ, ರವಿ ಪೂಜಾರ, ವಾಮದೇವ, ಹರೀಶ್, ವೈ. ರಂಗನಾಥ್, ನಾಗರಾಜ ಹಳ್ದಾರ ಮತ್ತಿತರರು ಉಪಸ್ಥಿತರಿದ್ದರು.

ಟ್ರ್ಯಾಕ್ಟರ್ ಮೂಲಕ ಮನೆ ಮನೆಗೆ ತೆರಳಿ ಉಚಿತವಾಗಿ ಗಿಡಗಳನ್ನು ವಿತರಿಸಲಾಯಿತು. ಇಂತಹ ಕಾರ್ಯಕ್ರಮಗಳು ಹೀಗೆ ಮುಂದುವರೆಯಲಿ ಎಂದು ಉಸ್ತುವಾರಿ ಸಂಚಾಲಕ ಹಾಗೂ ಶಿಕ್ಷಕರೂ ಆದ ವೈ. ರಾಘವೇಂದ್ರ ತಿಳಿಸಿದರು.

# ತೊಗರಿಕುಡಿ ಚಿವುಟುವ ಪ್ರಾತ್ಯಕ್ಷಿಕೆ




ಜಗಳೂರು, ಆ.25- ತೊಗರಿ ಬೆಳೆ ಬಿತ್ತನೆ ಮಾಡಿರುವ ತಾಕಿಗೆ ಭೇಟಿ ನೀಡಿ ರೈತರಿಗೆ ತೊಗರಿ ಬೆಳೆಯಲ್ಲಿ ಕುಡಿ ಚಿವುಟುವುದರಿಂದ ಆಗುವ ಲಾಭಗಳನ್ನು ತಿಳಿಸಲಾಯಿತು ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸ್ ತಿಳಿಸಿದ್ದಾರೆ.

ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ತಜ್ಞರೊಡನೆ ಆತ್ಮ ಯೋಜನೆಯ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕ ರೇಣುಕುಮಾರ ಮತ್ತು ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಅನಿಲ್ ಕುಮಾರ್ ಕ್ಷೇತ್ರ ಭೇಟಿ ಮಾಡಿದರು.

ಜಗಳೂರು ಗ್ರಾಮದ ಸಮೀಪದ ನಿಂಗಣ್ಣ ಎಂಬುವವರು 6.5 ಎಕರೆ ಮತ್ತು ತೋರಣಘಟ್ಟ ಗ್ರಾಮದ ರೈತರಾದ ಸುಧಾಕರ, ತಿಪ್ಪೇಸ್ವಾಮಿ ಮತ್ತು ಇತರರು ಸುಮಾರು 25 ಎಕರೆ ತೊಗರಿ ಬೆಳೆ ಬಿತ್ತನೆ ಮಾಡಿದ್ದು, ತಾಕಿಗೆ ಭೇಟಿ ನೀಡಿ, ರೈತರಿಗೆ ತೊಗರಿ ಬೆಳೆಯಲ್ಲಿ ಕುಡಿ ಚಿವುಟುವುದರಿಂದ ಆಗುವ ಲಾಭಗಳನ್ನು ತಿಳಿಸಲಾಯಿತು.

'Solar Nipping Machine' ನಿಂದ ಕುಡಿ ಚಿವುಟುವ ಪ್ರಾತ್ಯಕ್ಷಿಕೆ ಮೂಲಕ ರೈತರಿಗೆ ತೋರಿಸಲಾಯಿತು. ತೊಗರಿಯಲ್ಲಿ ಸ್ವಲ್ಪ ಹುಳುವಿನ ಬಾಧೆ ಇರುವುದರಿಂದ ಮತ್ತು ತಡವಾಗಿ ಬಿತ್ತನೆ ಆಗಿರುವುದರಿಂದ ರೈತರಿಗೆ Profenfos 2.5 ಮಿ.ಲೀ. + ಲಘು ಪೋಷಕಾಂಶಗಳ ದ್ರವ ರೂಪ 5 ಮಿ.ಲೀ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಣೆ ಮಾಡಲು ಡಾ. ಮಲ್ಲಿಕಾರ್ಜುನ ಸಲಹೆ ನೀಡಿದರು.

ರೈತರು ಪ್ರತ್ಯೇಕವಾಗಿ ವಾಟ್ಸಾಪ್ ಗುಂಪು ರಚನೆ ಮಾಡಲು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದರು. ರೈತರು ಇಲಾಖೆಯ ಜೊತೆಯಲ್ಲಿ ನಿರಂತರ ಸಂಪರ್ಕ ಇಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

# ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ನಾಗರಿಕರಿಗೂ ತಿಳಿಯಪಡಿಸುವುದೇನೆಂದರೆ, **ಶ್ರೀಮತಿ ಸುಧಾ ಹಾಗೂ ಇನ್ನೊಬ್ಬರು (ವಾದಿಗಳು) ಇವರುಗಳು ಶಿವಕುಮಾರ್ ಮತ್ತು ಇತರರು (ಪ್ರತಿವಾದಿಗಳು)** ಇವರ ವಿರುದ್ಧ ಈ ಕೆಳಗಿನ ಅನುಸೂಚಿಯಲ್ಲಿ ವರ್ಣಿಸಲಾದ ಸ್ವತ್ತಿನ ಮೇಲೆ ಅಸಲು ದಾವೆ ಸಂಖ್ಯೆ : 208/2021 ನ್ನು ಪಾಲು ವಿಭಾಗಕ್ಕಾಗಿ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ದಾವಣಗೆರೆ ಇಲ್ಲಿ ಸಲ್ಲಿಸಿದ್ದು, ಸದರಿ ಪ್ರಕರಣವು ಪ್ರಸ್ತುತ ಈಗ ಚಾಲ್ತಿಯಲ್ಲಿರುತ್ತದೆ. ಅಲ್ಲದೆ ಘನ ನ್ಯಾಯಾಲಯವು 2 ಮತ್ತು 3ನೇ ಪ್ರತಿವಾದಿಗಳಾದ **ಡಿ. ಪ್ರಭಾವತಿ ಕೋಂ. ಲೇಟ್ ರಾಮಕೃಷ್ಣರೆಡ್ಡಿ ಮತ್ತು ಭ್ರಮ್ಮನಂದರೆಡ್ಡಿ ಬಿನ್ ಚೆಂಚ್ಚಿರೆಡ್ಡಿ** ವಿರುದ್ಧ ಸದರಿ ಕೆಳಗಿನ ಅನುಸೂಚಿಯ ಸ್ವತ್ತುಗಳನ್ನು ಯಾರಿಗೂ, ಯಾವುದೇ ರೀತಿಯಿಂದ ಮಾರಾಟ ಮಾಡಬಾರದೆಂದು ತಡೆಯಾಜ್ಞೆ ನೀಡಿರುತ್ತದೆ. ಪ್ರಸ್ತುತ ಈಗ ಈ ದಾವೆಯಲ್ಲಿರುವ ಸ್ವತ್ತನ್ನು 2 ಮತ್ತು 3ನೇ ಪ್ರತಿವಾದಿಯರು ಮಾರಲು ಪ್ರಯತ್ನಿಸಿದ್ದು, ಈ ಕೆಳಗಿನ ಅನುಸೂಚಿಯ ಸ್ವತ್ತನ್ನು ಸಾರ್ವಜನಿಕರು ಖರೀದಿಸಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಆದಾಗ್ಯೂ ಸಾರ್ವಜನಿಕರು ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿದರೆ ಕಾನೂನಿನ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಎಂದು ಈ ಮೂಲಕ ತಿಳಿಯತಕ್ಕದ್ದು.

**-: ಅನುಸೂಚಿ :-**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಶಾಬನೂರು ಗ್ರಾಮದಲ್ಲಿರುವ ರಿ. ಸರ್ವೆ ನಂ. 206/2ಎ3, ವಿಸ್ತೀರ್ಣ 1 ಎಕರೆ ಹಾಗೂ 20 ಗುಂಟೆ ಜಮೀನಿಗೆ ಚಕ್ಕುಬಂದಿ:- **ಪೂರ್ವಕ್ಕೆ : ಶಿವಪ್ಪನವರ ಜಮೀನು, ಪಶ್ಚಿಮಕ್ಕೆ : ಶೇಖರಪ್ಪನವರ ಜಮೀನು, ಉತ್ತರಕ್ಕೆ : ಕುಂದುವಾಡ ನಾಗರಾಜಪ್ಪನವರ ಜಮೀನು, ದಕ್ಷಿಣಕ್ಕೆ : ಕೊಂಡಜ್ಜಿ ರುದ್ರಪ್ಪನವರ ಜಮೀನು.**

ಸಹಿ/-
ಕಕ್ಷಿದಾರರ ಸಹಿ (ವಾದಿ)
**(ಸುಧಾ)**

ಸಹಿ/-
**ಅಜಯ್. ಸಿ.** (ಎ.ಸಿ) ವಕೀಲರು,
ದಾವಣಗೆರೆ.
**ಮೊ: 97430 19896**

# ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ನಾಗರಿಕರಿಗೂ ತಿಳಿಯಪಡಿಸುವುದೇನೆಂದರೆ, **ಶ್ರೀಮತಿ ಕೆ.ಎಸ್. ಮಂಜುಳಾ @ ಮಂಜುಳಾ ಹಾಗೂ ಇನ್ನೊಬ್ಬರು (ವಾದಿಗಳು) ಇವರುಗಳು ಕೆ.ಲಿಂಗರಾಜ್ ಮತ್ತು ಇತರರು (ಪ್ರತಿವಾದಿಗಳು)** ಇವರ ವಿರುದ್ಧ ಈ ಕೆಳಗಿನ ಅನುಸೂಚಿಯಲ್ಲಿ ವರ್ಣಿಸಲಾದ ಸ್ವತ್ತಿನ ಮೇಲೆ ಅಸಲು ದಾವೆ ಸಂಖ್ಯೆ : 207/2021 ನ್ನು ಪಾಲು ವಿಭಾಗಕ್ಕಾಗಿ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ದಾವಣಗೆರೆ ಇಲ್ಲಿ ಸಲ್ಲಿಸಿದ್ದು, ಸದರಿ ಪ್ರಕರಣವು ಪ್ರಸ್ತುತ ಈಗ ಚಾಲ್ತಿಯಲ್ಲಿರುತ್ತದೆ. ಅಲ್ಲದೆ ಘನ ನ್ಯಾಯಾಲಯವು 2 ಮತ್ತು 3ನೇ ಪ್ರತಿವಾದಿಗಳಾದ **ಡಿ. ಪ್ರಭಾವತಿ ಕೋಂ ಲೇಟ್ ರಾಮಕೃಷ್ಣರೆಡ್ಡಿ ಮತ್ತು ಭ್ರಮ್ಮನಂದರೆಡ್ಡಿ ಬಿನ್ ಚೆಂಚ್ಚಿರೆಡ್ಡಿ** ವಿರುದ್ಧ ಸದರಿ ಕೆಳಗಿನ ಅನುಸೂಚಿಯ ಸ್ವತ್ತುಗಳನ್ನು ಯಾರಿಗೂ, ಯಾವುದೇ ರೀತಿಯಿಂದ ಮಾರಾಟ ಮಾಡಬಾರದೆಂದು ತಡೆಯಾಜ್ಞೆ ನೀಡಿರುತ್ತದೆ, ಪ್ರಸ್ತುತ ಈಗ ಈ ದಾವೆಯಲ್ಲಿರುವ ಸ್ವತ್ತನ್ನು 2 ಮತ್ತು 3ನೇ ಪ್ರತಿವಾದಿಯರು ಮಾರಲು ಪ್ರಯತ್ನಿಸಿದ್ದು, ಈ ಕೆಳಗಿನ ಅನುಸೂಚಿಯ ಸ್ವತ್ತನ್ನು ಸಾರ್ವಜನಿಕರು ಖರೀದಿಸಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಆದಾಗ್ಯೂ ಸಾರ್ವಜನಿಕರು ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿದರೆ ಕಾನೂನಿನ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಎಂದು ಈ ಮೂಲಕ ತಿಳಿಯತಕ್ಕದ್ದು.

**-: ಅನುಸೂಚಿ :-**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಶಾಬನೂರು ಗ್ರಾಮದಲ್ಲಿರುವ ರಿ. ಸರ್ವೆ ನಂ. 206/2ಎ2, ವಿಸ್ತೀರ್ಣ 1 ಎಕರೆ ಹಾಗೂ 20 ಗುಂಟೆ ಜಮೀನಿಗೆ ಚಕ್ಕುಬಂದಿ:- **ಪೂರ್ವಕ್ಕೆ : ಚೆನ್ನಪ್ಪನವರ ಜಮೀನು, ಪಶ್ಚಿಮಕ್ಕೆ : ದೊಡ್ಡರುದ್ರಪ್ಪನವರ ಜಮೀನು, ಉತ್ತರಕ್ಕೆ : ಕುಂದುವಾಡ ನಾಗರಾಜಪ್ಪನವರ ಜಮೀನು, ದಕ್ಷಿಣಕ್ಕೆ : ಕೊಂಡಜ್ಜಿ ರುದ್ರಪ್ಪನವರ ಜಮೀನು.**

ಸಹಿ/-
ಕಕ್ಷಿದಾರರ ಸಹಿ (ವಾದಿ)
**(ಕೆ.ಎಸ್. ಮಂಜುಳಾ)**

ಸಹಿ/-
**ಅಜಯ್. ಸಿ.** (ಎ.ಸಿ) ವಕೀಲರು,
ದಾವಣಗೆರೆ.
**ಮೊ: 97430 19896**

# ಹೊಳೆಸಿರಿಗೆರೆಯಲ್ಲಿ ವಿಶ್ವ ಸೊಳ್ಳೆ ದಿನಾಚರಣೆ



ಮಲೇಬೆನ್ನೂರು, ಆ.25- ಮಾರಕ ಕೀಟವಾಗಿರುವ ಸೊಳ್ಳೆಯಿಂದ ಹರಡುವಂತಹ ಮಲೇರಿಯಾ, ಡೆಂಗ್ಯೂ, ಚಿಕನ್‌ಗುನ್ಯಾ, ಆನೆಕಾಲು ರೋಗ ಮತ್ತು ಮೆದುಳು ಜ್ವರ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸುವುದೇ 'ಸೊಳ್ಳೆ' ದಿನದ ಉದ್ದೇಶವಾಗಿದೆ ಎಂದು ಹರಿಹರ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಚಂದ್ರಮೋಹನ್ ತಿಳಿಸಿದರು.

ಹೊಳೆಸಿರಿಗೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಂದು ಹಮ್ಮಿಕೊಂಡಿದ್ದ 'ವಿಶ್ವ ಸೊಳ್ಳೆ' ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಿರ್‌ಡೊನಾಲ್ಡ್ ರೋಸ್ ಅವರು 1897ರಲ್ಲಿ ಸೊಳ್ಳೆಗಳು ಮತ್ತು ಮಲೇರಿಯಾ ನಡುವಿನ ಸಂಬಂಧವನ್ನು ಕಂಡು ಹಿಡಿದಿರುವುದಕ್ಕಾಗಿ ಪ್ರತಿ ವರ್ಷ ಆಗಸ್ಟ್ 20 ರಂದು ವಿಶ್ವ ಸೊಳ್ಳೆ ದಿನವನ್ನಾಗಿ ಆಚರಿಸಲಾಗುತ್ತದೆ.

ಮಲೇರಿಯಾವು ಸೊಳ್ಳೆಯಿಂದ ಹರಡುವುದು ಎಂದು ಪತ್ತೆ ಮಾಡಿದಂತಹ ರೋಸ್ ಮತ್ತು ಈ ಬಗ್ಗೆ ಕೆಲಸ ಮಾಡಿದಂತಹ ಹಲವಾರು ವಿಜ್ಞಾನಿಗಳಿಗೆ ಈ ದಿನ ಗೌರವ ಸಲ್ಲಿಸಲಾಗುವುದೆಂದು ಅವರು ಹೇಳಿದರು.

ಗ್ರಾಮದ ಯುವ ಮುಖಂಡ ಬಸಯ್ಯ ಹಿರೇಮಠ, ಗ್ರಾ.ಪಂ. ಸದಸ್ಯರಾದ ರಾಜಪ್ಪ, ಶಾಂತಮ್ಮ, ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ಮಂಜುನಾಥ್, ಶಿವಶಂಕರ್, ಪ್ರಕಾಶ್, ಶಿಲ್ಪ ಮತ್ತಿತರರು ಈ ವೇಳೆ ಹಾಜರಿದ್ದರು.


ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

# ಕಲಾಕುಂಚ ವಿದ್ಯಾನಗರ ಶಾಖೆಗೆ ದಿಳ್ಯಪ್ಪ ಅಧ್ಯಕ್ಷ

ದಾವಣಗೆರೆ, ಆ.18- ಕಲಾಕುಂಚ ವಿದ್ಯಾನಗರ ಶಾಖೆಯ ಅಧ್ಯಕ್ಷರಾಗಿ ಬಿ. ದಿಳ್ಯಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ಬಿ.ಎಂ. ಮುರಿಗೆಪ್ಪ ಆಯ್ಕೆಯಾಗಿದ್ದು, ಶೀಘ್ರದಲ್ಲೇ ವಿದ್ಯಾನಗರ ಶಾಖೆಯನ್ನು ಉದ್ಘಾಟಿಸಲು ತೀರ್ಮಾನಿಸಲಾಯಿತು. ಕಲಾಕುಂಚ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಿ.ಬಿ. ಲೋಕೇಶ್, ಸಮಿತಿ ಸದಸ್ಯೆ ಸುಮಾ ಏಕಾಂತಪ್ಪ ಇನ್ನಿತರರು ಉಪಸ್ಥಿತರಿದ್ದರು.

## ಪಿ. ರುದ್ರಮುನಿ ನಿಧನ




ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಎಸ್.ಹೆಚ್. ಹೂಗಾರ್ ಅವರ ಸಹೋದರರು ಹಾಗೂ ವಿಶ್ರಾಂತ ಶಿಕ್ಷಕರಾದ ಶ್ರೀ ಪಿ. ರುದ್ರಮುನಿ ಅವರು ದಿನಾಂಕ 25.8.2021ರ ಬುಧವಾರ ಸಂಜೆ 5.55ಕ್ಕೆ ನಿಧನರಾದರು. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.8.2021ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮ ನಂದಿಗಾವಿಯಲ್ಲಿ ನೆರವೇರಿಸಲಾಗುವುದು.

# ಮಾಯಕೊಂಡ ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಆ.23- ಮಾಯಕೊಂಡ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ತರಬೇತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಎಲೆಕ್ಟ್ರಿಕಲ್ ಮತ್ತು ಫಿಟ್ಟರ್ ಎರಡು ವೃತ್ತಿಗಳಿಗೆ ತರಬೇತಿ ನೀಡಲಾಗುತ್ತಿದ್ದು, ಪ್ರವೇಶ ಪಡೆಯಲು ಇದೇ ದಿನಾಂಕ 27 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರು ಅಥವಾ ಇಲಾಖೆಯ ಜಾಲತಾಣ www.emptrg.kar.nic.in ಅನ್ನು ಸಂಪರ್ಕಿಸಬಹುದು.

# ಹರಿಹರದ ಅಯ್ಯಪ್ಪ ಸ್ವಾಮಿ ಪರಮ ಭಕ್ತ ರುದ್ರಮುನಿ ನಿಧನ




ಹರಿಹರ, ಆ.25- ತಾಲ್ಲೂಕಿನ ನಂದಿಗಾವಿ ಗ್ರಾಮದ ಪಿ. ರುದ್ರಮುನಿ ಅವರು ಇಂದು ಸಂಜೆ ನಿಧನರಾಗಿದ್ದಾರೆ. ಶ್ರೀ ಅಯ್ಯಪ್ಪ ಸ್ವಾಮಿಯ ಪರಮ ಭಕ್ತರಾಗಿದ್ದ ಅವರು, ಶ್ರೀ ಅಯ್ಯಪ್ಪ ಸ್ವಾಮಿ ದೀಪೋತ್ಸವ ಸಮಯದಲ್ಲಿ ಪ್ರತಿವರ್ಷವೂ ನಗರದ ಅಯ್ಯಪ್ಪ ಸ್ವಾಮಿ ಭಕ್ತರೊಂದಿಗೆ ವ್ರತ ಪ್ರಾರಂಭಿಸಿ, ನಂತರದಲ್ಲಿ ಶಬರಿಮಲೈಗೆ ಅವರನ್ನು ಕರೆದುಕೊಂಡು ಹೋಗಿ ಅಯ್ಯಪ್ಪ ಸ್ವಾಮಿ ದರ್ಶನದ ವ್ಯವಸ್ಥೆಯನ್ನು ಹಲವಾರು ವರ್ಷಗಳಿಂದ ಮಾಡುತ್ತಿದ್ದರು.

ನಗರದ ಗಾಂಧಿ ಮೈದಾನದಲ್ಲಿ ಪ್ರತಿವರ್ಷ ಅಯ್ಯಪ್ಪ ಸ್ವಾಮಿ ದೀಪೋತ್ಸವವು ಇವರ ನೇತೃತ್ವದಲ್ಲಿ ನಡೆಯುತ್ತಿತ್ತು. ಶಿಕ್ಷಕರೂ ಆಗಿದ್ದ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾ ಅಧ್ಯಕ್ಷ ಎಸ್.ಹೆಚ್. ಹೂಗಾರ ಅವರ ಸಹೋದರರಾಗಿದ್ದಾರೆ.

ಮೃತರ ಮನೆಗೆ ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಎಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಸೇರಿದಂತೆ, ಹಲವಾರು ಗಣ್ಯರು ಭೇಟಿ ನೀಡಿ ಸಂತಾಪ ಸೂಚಿಸಿದರು. ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 26 ಗುರುವಾರ ಬೆಳಗ್ಗೆ 11 ಗಂಟೆಗೆ ನಂದಿಗಾವಿ ಗ್ರಾಮದಲ್ಲಿ ನಡೆಯಲಿದೆ.

## 9ನೇ ವರ್ಷದ ಪುಣ್ಯಸ್ಮರಣೆ



**ಶ್ರೀ ನಿಂಗಪ್ಪರ ಬಸಪ್ಪನವರು**
**ಹೊಸಕುಂದವಾಡ**
ಜನನ : 10.02.1954
ನಿಧನ : 26.08.2012

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು. ನಿಮ್ಮ ನೆನಪು ನಮಗೆ ಸದಾ ಹಚ್ಚ ಹಸಿರು, ಸ್ಫೂರ್ತಿದಾಯಕ. ನಿಮ್ಮ ಪ್ರೀತಿ, ಆರೈಕೆ, ನೆನಪುಗಳೇ ನಮಗೆ ದಾರಿದೀಪ.

ಪತ್ನಿ : **ಶ್ರೀಮತಿ ಶಾರದಮ್ಮ ಬಸಪ್ಪನವರು**
ಪುತ್ರ : **ಪರಶುರಾಮ್ ಬಿ.,** ಉಪ ತಹಶೀಲ್ದಾರ್, ಕಂದಾಯ ಇಲಾಖೆ
ಸೊಸೆ : **ಶ್ರೀಮತಿ ಕವಿತ ಪರಶುರಾಮ್**
ಮೊಮ್ಮಕ್ಕಳು : **ಕು.ಶ್ರೇಷ್ಠ ಪಿ.ರಾಮ್, ಚಿ. ವೈದಿಕ್ ಪಿ. ರಾಮ್**
ಪುತ್ರಿ : **ಶ್ರೀಮತಿ ಮಾಲತಿ,** ಅಳಿಯ : **ಹೆಚ್. ಶಿವಣ್ಣ,**
ಮೊಮ್ಮಕ್ಕಳು : **ಚಿ. ಕೌಶಿಕ್, ಕು. ಖುಷಿ,**
ಪುತ್ರ : **ಸಂತೋಷ್ ಬಿ.,**
ಸೊಸೆ : **ಶ್ರೀಮತಿ ಶೃತಿ,** ಮೊಮ್ಮಗಳು : **ಪುಟಾಣಿ ತನ್ವಿಕ**



|| ಶ್ರೀ ಮೈಲಾರ ಲಿಂಗೇಶ್ವರ ಪ್ರಸನ್ನ || || ಶ್ರೀ ಚಂದ್ರಗುತ್ತೆಮ್ಮ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಜಾಲಿನಗರ ವಾಸಿ **ಶ್ರೀ ಸಲ್ಲಳ್ಳಿ ಮಹಾಲಿಂಗಪ್ಪ ಮತ್ತು ಸಹೋದರರು ಇವರುಗಳು ಮಾಡುವ ವಿಜ್ಞಾಪನೆಗಳು.**
ದಿನಾಂಕ 17-08-2021 ನೇ ಮಂಗಳವಾರ
ರಾತ್ರಿ 2-20 ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಯಲ್ಲಮ್ಮ**
(ದಿ|| ಶ್ರೀ ಸಲ್ಲಳ್ಳಿ ಗುಡ್ಡಪ್ಪನವರ ಧರ್ಮಪತ್ನಿ)

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಸಮಾರಾಧನೆಯನ್ನು ದಿನಾಂಕ 26.08.2021ನೇ ಗುರುವಾರ ಬೆಳಿಗ್ಗೆ 10.30 ಕ್ಕೆ ದಾವಣಗೆರೆ ಜಾಲಿನಗರದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: **ಶ್ರೀ ಸಲ್ಲಳ್ಳಿ ಮಹಾಲಿಂಗಪ್ಪ ಮತ್ತು ಸಹೋದರರು, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಸಲ್ಲಳ್ಳಿ ವಂಶಸ್ಥರು, ಹಾಗೂ ಶಿಂಗ್ರಿಹಳ್ಳಿ ವಂಶಸ್ಥರು, ಬಂಧು-ಮಿತ್ರರು.**

# ಅವಿರತ ಶ್ರಮದಿಂದ ಪ್ರತಿಭೆಯ ಅನಾವರಣ

## ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಸಮಾರಂಭದಲ್ಲಿ ಡಾ.ಎಂ.ಜಿ. ಈಶ್ವರಪ್ಪ



ದಾವಣಗೆರೆ, ಆ.25- ಅವಿರತ ಶ್ರಮದಿಂದ ಪ್ರತಿಭೆ ಅನಾವರಣಗೊಳ್ಳಲು ಸಾಧ್ಯವಿದೆ. ವಿದ್ಯಾರ್ಥಿಗಳು ಸತತ ಅಧ್ಯಯನದಲ್ಲಿ ತೊಡಗಿಸಿಕೊಂಡು, ಅತಿ ಹೆಚ್ಚು ಅಂಕಗಳನ್ನು ಗಳಿಸುವ ಮೂಲಕ ಶಾಲೆಗೆ ಕೀರ್ತಿ ತರಬೇಕೆಂದು ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಕರೆ ನೀಡಿದರು.

ನಗರದ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿನ ಬಿ.ಇ.ಎ. ಪ್ರೌಢಶಾಲೆಯ ವತಿಯಿಂದ ಹಮ್ಮಿಕೊಂಡಿದ್ದ 2019-20 ನೇ ಸಾಲಿನ ಎಸ್ಸೆಸ್ಸೆಲ್ಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಾಷ್ಟ್ರಕವಿ ಕುವೆಂಪು ಅವರು ಮನೆಯಿಂದ ಹೊರ ಬರದೆ ಸತತ 6 ತಿಂಗಳ ಅವಿರತ ಶ್ರಮದ ಫಲವಾಗಿ ರಾಮಾಯಣ ದರ್ಶನಂ ಮಹಾಕಾವ್ಯ ಶ್ರೇಷ್ಠ ಕೃತಿಯಾಗಿ ಹೊರಹೊಮ್ಮಲು ಸಾಧ್ಯವಾಯಿತು.

ಆಹಾರ, ನೀರನ್ನೂ ಲೆಕ್ಕಿಸದೇ ಪ್ರಯೋಗಾಲಯದಲ್ಲಿ ನಿರಂತರವಾಗಿ ಸಂಶೋಧನೆ ಮಾಡಿದ್ದರಿಂದಲೇ ಐನ್‌ಸ್ಟೀನ್ ಖ್ಯಾತಿ ಗಳಿಸಲು ಸಾಧ್ಯವಾಯಿತು ಎಂದು ಇಬ್ಬರು ಮಹಾನ್ ಸಾಧಕರನ್ನು ಉದಾಹರಿಸಿದರು.

ತರಗತಿಯಲ್ಲಿ ದೇಹ ಮತ್ತು ಮನಸ್ಸನ್ನು ಕೇಂದ್ರೀಕರಿಸುವುದರಿಂದ ಪಾಠಗಳನ್ನು ಸರಿಯಾಗಿ ಅರ್ಥೈಸಿಕೊಂಡು ಅತ್ಯುತ್ತಮ ವಿದ್ಯಾರ್ಥಿಗಳಾಗಿ ಬೆಳೆಯಲು ಸಾಧ್ಯವಿದೆ ಎಂದರು.

ಸತತ ಅಧ್ಯಯನಶೀಲರಾಗಿ ಉತ್ತಮ ಅಂಕಗಳನ್ನು ಗಳಿಸುವ ಮೂಲಕ ಶಾಲೆಗೆ ಗೌರವ ತರುವ ಕೆಲಸ ಮಾಡುವಂತೆ ಹಿತ ನುಡಿದರು.

ಬಿಇಎ ಹೈಯರ್ ಪ್ರೈಮರಿ ಮತ್ತು ಬಿಇಎ ಪ್ರೌಢಶಾಲೆಯ ಆಡಳಿತಾಧಿಕಾರಿ ಪ್ರೊ. ವೈ. ವೃಷಭೇಂದ್ರಪ್ಪ ಮಾತನಾಡಿ, ಸಕಾರಾತ್ಮಕ ಚಿಂತನೆಗಳು ಆರೋಗ್ಯಕ್ಕೆ ಪೂರಕವಾಗಿರುತ್ತವೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಆರೋಗ್ಯದ ಕಡೆಗೂ ಹೆಚ್ಚು ಗಮನಹರಿಸುವ ಅಗತ್ಯವಿದೆ ಎಂದು ಹೇಳಿದರು.

ಪುಸ್ತಕಗಳೇ ನಿಜವಾದ ಆಸ್ತಿ. ವಿದ್ಯಾರ್ಥಿಗಳ ಭಾವನೆಗಳಿಗೆ ಸ್ಪಂದಿಸುವ ಮೂಲಕ ಸಂಸ್ಥೆ ಅವರಿಗೆ ಪ್ರೋತ್ಸಾಹಿಸುವ ಕೆಲಸ ಮಾಡಲಿದೆ. ಪ್ರತಿಭಾವಂತರನ್ನು ಗುರುತಿಸಿ ಅವರನ್ನು ಗೌರವಿಸುವ ಕಾರ್ಯ ಶ್ಲಾಘನೀಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಿಇಎ ಹೈಯರ್ ಪ್ರೈಮರಿ ಮತ್ತು ಬಿಇಎ ಪ್ರೌಢಶಾಲೆಯ ಅಧ್ಯಕ್ಷರಾದ ಶ್ರೀಮತಿ ಕಿರುವಾಡಿ ಗಿರಿಜಮ್ಮ ಮಾತನಾಡಿ, ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನಹರಿಸಬೇಕು. ತಂದೆ-ತಾಯಿಗಳಿಗೆ ಋಣಿಗಳಾಗಿರಬೇಕು ಎಂದರು.

ಸಂಸ್ಕಾರವಂತರಾದರೆ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ತಾವು ಶ್ರಮವಹಿಸಿ ಓದುವ ಜೊತೆಗೆ ತಮ್ಮ ಸ್ನೇಹಿತರನ್ನು ಓದಲು ಪ್ರೇರೇಪಿಸಬೇಕೆಂದು ಸಲಹೆ ನೀಡಿದರು.

2019-20 ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ಪಿ.ಜೆ. ಬಡಾವಣೆಯ ಬಿಇಎ ಪ್ರೌಢಶಾಲೆಯ ವಿದ್ಯಾರ್ಥಿನಿ ಕೆ. ಧನುಷಾ, ನಿಜಲಿಂಗಪ್ಪ ಬಡಾವಣೆ ಬಿಇಎ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಆರ್. ಸೋನಿಯಾ ಬಾಯಿ, ಗೌಸ್ ಇ ಜಮಾ, ಸಾಕ್ಷಿ ನಾಗರಾಜ್ ಮಶೆಟ್ಟಿ, ಎಂ.ಬಿ. ಸುಹಾಸ್, ಡಿ.ಬಿ. ಗ್ರೀಷ್, ಐಶ್ವರ್ಯ ಎ. ರಾವ್, ನಿತೀಶ್ ಆರ್. ಮಲಡಕರ್, ಕುಣೆಬೆಳಕೆರೆ ಬಾಪೂಜಿ ಪ್ರೌಢಶಾಲೆಯ ಯು. ನಿತ್ಯಾ, ಹರಿಹರದ ಶ್ರೀಮತಿ ಹಾಲಮ್ಮ ಶಾಮನೂರು ಶಿವಪ್ಪ ಪ್ರೌಢಶಾಲೆಯ ಎಂ.ಡಿ. ಆದಿಲ್ ಅತ್ತಾರ್ ಅವರಿಗೆ ನಗದು ಬಹುಮಾನ ನೀಡಿ ಸತ್ಕರಿಸಲಾಯಿತು.

ಸಾಕ್ಷಿ ಮತ್ತು ಗ್ರೀಷ್ಮ ಪ್ರಾರ್ಥಿಸಿದರು. ಸಹ ಶಿಕ್ಷಕಿ ಎಸ್. ಸಾದಿಯಾಬಾನು ಸ್ವಾಗತಿಸಿದರು. ಸಹ ಶಿಕ್ಷಕ ಕೆ.ಎಂ. ಮಹಂತೇಶ್ ನಿರೂಪಿಸಿದರು. ಸಹ ಶಿಕ್ಷಕ ಎಸ್. ಜಗನ್ನಾಥ್ ವಂದಿಸಿದರು.

# ಡೊನೇಷನ್ ಹಾವಳಿ ತಡೆಗೆ ಒತ್ತಾಯ



## ಹರಪನಹಳ್ಳಿಯಲ್ಲಿ ಏಕಲವ್ಯ ಸಂಘರ್ಷ ಸಮಿತಿ ಪ್ರತಿಭಟನೆ

ಹರಪನಹಳ್ಳಿ, ಆ.25- ಖಾಸಗಿ ಶಿಕ್ಷಣ ಸಂಸ್ಥೆಗಳ ಡೊನೇಷನ್ ಹಾವಳಿಗೆ ಕಡಿವಾಣ ಹಾಕುವಂತೆ ಹಾಗೂ ಸರ್ಕಾರದ ನಿಯಮಾವಳಿಗಳನ್ನು ಮೀರಿ ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ, ಏಕಲವ್ಯ ಸಂಘರ್ಷ ಸಮಿತಿ ತಾಲ್ಲೂಕು ಘಟಕದ ವತಿಯಿಂದ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಏಕಲವ್ಯ ಸಂಘರ್ಷ ಸಮಿತಿ (ಇಎಸ್‌ಎಸ್) ಕಾರ್ಯಕರ್ತರು ಪಟ್ಟಣದ ರಾಜ ಸೋಮಶೇಖರ ನಾಯಕ ವೃತ್ತದಿಂದ (ಹಿರೇಕೆರೆ ವೃತ್ತ) ಹಳೆ ಬಸ್ ನಿಲ್ದಾಣ, ಪ್ರವಾಸಿ ಮಂದಿರ ವೃತ್ತ ಮಾರ್ಗವಾಗಿ ಪಾದಯಾತ್ರೆಯ ಮೂಲಕ ಮಿನಿ ವಿಧಾನಸೌಧಕ್ಕೆ ತೆರಳಿದರು. ದಾರಿಯುದ್ದಕ್ಕೂ ಖಾಸಗಿ ಶಿಕ್ಷಣ ಸಂಸ್ಥೆಗಳ ವಿರುದ್ಧ ಧಿಕ್ಕಾರ ಕೂಗಿದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೋರಿಶೆಟ್ಟಿ ಉಚ್ಚೆಂಗೆಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸೇರಿದಂತೆ ಬಡವರೇ ಹೆಚ್ಚು ವಾಸಿಸುತ್ತಿದ್ದು, ಸಾವಿರಾರು ವಿದ್ಯಾರ್ಥಿಗಳು ಪ್ರತಿವರ್ಷ ಪಿ.ಯು., ಪದವಿ ಸೇರಿದಂತೆ ವಿವಿಧ ಕೋರ್ಸ್‌ಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ಕೋವಿಡ್ ಇರುವುದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಶುಲ್ಕ ತೆಗೆದುಕೊಳ್ಳಬಾರದು ಎಂಬ ಆದೇಶವಿದ್ದರೂ ಮನಬಂದಂತೆ ಶುಲ್ಕ ವಸೂಲಿ ಮಾಡುತ್ತಿದ್ದು, ಬಡ ಮತ್ತು ಎಸ್.ಸಿ. ಎಸ್.ಟಿ ವಿದ್ಯಾರ್ಥಿಗಳಿಗೆ ಶುಲ್ಕ ಕಟ್ಟಲು ತೊಂದರೆಯಾಗುತ್ತಿದೆ.

ಡೊನೇಷನ್ ರೂಪದಲ್ಲಿ ಹಣ ವಸೂಲಿ ಮಾಡುತ್ತಿರುವುದು ಶೈಕ್ಷಣಿಕ ಶೋಷಣೆಯಾಗಿದ್ದು, ಈ ಕೂಡಲೇ ತಾಲ್ಲೂಕು ಆಡಳಿತ ಎಚ್ಚೆತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ನಿಗದಿ ಪಡಿಸಿದ ಶುಲ್ಕ ತೆಗೆದುಕೊಳ್ಳಲು ಕಟ್ಟುನಿಟ್ಟಿನ ಆದೇಶ ಮಾಡಬೇಕು ಎಂದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ನೀಲಗುಂದ ಹೋಬಳಿಯ ಸಂಘಟನಾ ಕಾರ್ಯದರ್ಶಿ ಮಾಳ್ಗಿ ತಿಮ್ಮೇಶ್ ಮಾತನಾಡಿ, ಈ ವರ್ಷ ಸರ್ಕಾರಿ ಆದೇಶದ ಅನುಸಾರ ವಿದ್ಯಾರ್ಥಿಗಳು ಎಷ್ಟು ಶುಲ್ಕ ಭರಿಸಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಬೇಕು ಎಂದು ಒತ್ತಾಯಿಸಿದರು.

ಏಕಲವ್ಯ ಸಂಘರ್ಷ ಸಮಿತಿ ತಾಲ್ಲೂಕು ಅಧ್ಯಕ್ಷ ರಾಯದುರ್ಗದ ಪ್ರಕಾಶ ಮಾತನಾಡಿ, ಡೊನೇಷನ್‌ಗೆ ಕಡಿವಾಣ ಬೀಳದಿದ್ದಲ್ಲಿ ಮುಂದಿನ ದಿನಗಳಲ್ಲಿ ತಾಲ್ಲೂಕಿನ ಎಲ್ಲಾ ಖಾಸಗಿ ಶಾಲಾ-ಕಾಲೇಜುಗಳ ಮುಂದೆ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಉಪಾಧ್ಯಕ್ಷರುಗಳಾದ ಮೈದೂರಿನ ಪರಶುರಾಮ್, ಅಲಮರಸೀಕೆರೆಯ ಟಿ. ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಜೆ. ಶಿವರಾಜ, ಖಜಾಂಚಿ ಜಿ. ದಾದಾಪುರದ ಹರೀಶ, ಸಂಘಟನಾ ಕಾರ್ಯದರ್ಶಿಗಳಾದ ನೀಲಗುಂದದ ವೆಂಕಟೇಶ್, ಅರಸೀಕೆರೆ ಪ್ರದೀಪ್, ತಲುವಾಗಲು ಟಿ. ಮಂಜುನಾಥ್, ಹಲುವಾಗಲು ಎಸ್.ಬಿ. ಗಣೇಶ್, ಹರಪನಹಳ್ಳಿಯ ಜಿ. ವಿಜಯ್‌ಕುಮಾರ್, ಸಹ ಕಾರ್ಯದರ್ಶಿಗಳಾದ ಕಣಿವಿಹಳ್ಳಿ ಎ.ಟಿ. ಶಿವರಾಜ, ನಿಚ್ಚವ್ವನಹಳ್ಳಿ ಕಾಳಜ್ಜ, ಮತ್ತಿಹಳ್ಳಿ ಗಿರೀಶ್ ಇನ್ನಿತರರು ಪಾಲ್ಗೊಂಡಿದ್ದರು.

# ಆ್ಯಪ್ ಪಾಂಪ್ಲೆಟ್ ಬಿಡುಗಡೆ



ಹೊನ್ನಾಳಿ, ಆ.23- ಶಾಸಕ ಎಂ.ಪಿ ರೇಣುಕಾಚಾರ್ಯ ಅವರು ಹೊನ್ನಾಳಿ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ರೈತರ ಬೆಳೆ ಸಮೀಕ್ಷೆ ಆ್ಯಪ್‌ನ ಪಾಂಪ್ಲೆಟ್ ಬಿಡುಗಡೆ ಮಾಡಿ, ರೈತರ ಬೆಳೆ ಸಮೀಕ್ಷೆ ಬಂಡಿತೇರಿಗೆ ವಾಹನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಪಾಲ್ಗೊಂಡಿದ್ದರು. ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ರೈತರು ತಮ್ಮ ಹೊಲದಲ್ಲಿ ತಮ್ಮ ಬೆಳೆ ಸಮೀಕ್ಷೆಯನ್ನು ತಾವುಗಳೇ ಮಾಡಬೇಕಾಗಿ ತಿಳಿಸಿದರು.

# ರೈತರ ಆದಾಯ ದ್ವಿಗುಣ : ಸಿಎಂ

(1ನೇ ಪುಟದಿಂದ) ಹಲವು ಕ್ರಮ ಕೈಗೊಳ್ಳಲಿದೆ ಎಂದರು.

ರೈತರ ಉತ್ಪನ್ನಗಳ ಮೌಲ್ಯ ಹೆಚ್ಚಿಸಲು ಎರಡನೇ ಕೃಷಿ ನಿರ್ದೇಶನಾಲಯವನ್ನು ಅಸ್ತಿತ್ವಕ್ಕೆ ತಂದು ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಹೈನುಗಾರಿಕೆ, ಮೀನುಗಾರಿಕೆ ಒಳಗೊಂಡಂತೆ ಕೃಷಿ ಉತ್ಪನ್ನಗಳ ಸಂಸ್ಕರಣೆಗೆ ಒತ್ತು ನೀಡಲಾಗುವುದು ಎಂದವರು ಹೇಳಿದ್ದಾರೆ.

ಉತ್ಪನ್ನಗಳ ಮೌಲ್ಯ ಹೆಚ್ಚಿಸಲು ವಿಶೇಷ ಕಾರ್ಯಪಡೆ ರಚಿಸುವುದಾಗಿಯು ಮುಖ್ಯಮಂತ್ರಿಯವರು ಇದೇ ಸಂದರ್ಭದಲ್ಲಿ ತಿಳಿಸಿದರು. ಇದಕ್ಕೆ ಸೆಕೆಂಡರಿ ಅಗ್ರಿಕಲ್ಚರ್ ಡೈರೆಕ್ಟರೇಟ್ ಎಂದು ಹೆಸರಿಟ್ಟು, ಕೃಷಿಯಲ್ಲಿ ದೊಡ್ಡ ಬದಲಾವಣೆ ಮಾಡುವ ಮೂಲಕ ರೈತರ ಆದಾಯ ದ್ವಿಗುಣಕ್ಕೆ ಒತ್ತು ನೀಡಲಾಗುವುದು.

2023 ರ ವೇಳೆಗೆ ಕೃಷಿಕನ ಆದಾಯ ದ್ವಿಗುಣಗೊಳಿಸಿ, ಇಡೀ ದೇಶದಲ್ಲೇ ನಾವು ರೈತರ ಆದಾಯವನ್ನು ದ್ವಿಗುಣಗೊಳಿಸಿದ ಖ್ಯಾತಿಗೆ ಬರಬೇಕೆಂಬ ಬಯಕೆ ನನ್ನದು. ಸರ್ಕಾರದ ನಿಲುವಿಗೆ ರೈತರು ಸಹಕಾರ ನೀಡಿದರೆ, ಅವರ ಆದಾಯ ಹೆಚ್ಚಿಸುವ ಸಹಕಾರಿಯಾಗುತ್ತದೆ.

ರೈತರ ಆದಾಯ ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ನಮ್ಮ ಜೊತೆ ಕೈಜೋಡಿಸಲು ಸಿದ್ಧವಿದೆ. ಹಾಗಾಗಿ ಇಲ್ಲಿ ರೈತರಿರುವ ಸಮಿತಿಯನ್ನು ರಚಿಸಿ, ಕೇಂದ್ರದ ಕೃಷಿ ಇಲಾಖೆ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡು, ರಾಜ್ಯಕ್ಕೆ ಸಂಬಂಧಿಸಿದ ನಿರ್ದಿಷ್ಟ ವರದಿಯನ್ನು ಜಾರಿಗೊಳಿಸುತ್ತೇವೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳನ್ನು ಬಳಸಿಕೊಂಡು ಬಿತ್ತನೆ ಬೀಜ, ರಸಗೊಬ್ಬರ, ಕೀಟ ನಾಶಕ ನಿರ್ವಹಣೆಯನ್ನು ಸುಧಾರಿಸಿ, ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

# ಕೊರೊನಾ ವಾರಿಯರ್ಸ್‌ಗೆ ಗೌರವಾರ್ಪಣೆ



## ರಾಣೇಬೆನ್ನೂರು ಶಾಸಕ ಅರುಣಕುಮಾರ ಪೂಜಾರ ಹುಟ್ಟುಹಬ್ಬ

ರಾಣೇಬೆನ್ನೂರು, ಆ.25- ಜಗತ್ತನ್ನೇ ತಲ್ಲಣಗೊಳಿಸಿದ ಕೊರೊನಾ ವೈರಸ್ ಮಹಾಮಾರಿಯ ಮೊದಲ ಹಾಗೂ ಎರಡನೇ ಅಲೆಯನ್ನು ಕಟ್ಟಿಹಾಕುವಲ್ಲಿ ತಾಲ್ಲೂಕಿನ ನನ್ನೆಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮರೋಪಾದಿಯಲ್ಲಿ ಕೆಲಸ ಮಾಡಿದರು ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ತಮ್ಮ ಹುಟ್ಟುಹಬ್ಬ ಹಾಗೂ ಕೊರೊನಾ ವಾರಿಯರ್ಸ್ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಇಂತಹ ಸಂಕಷ್ಟ ಹಾಗೂ ಸಂದಿಗ್ಧ ಸಂದರ್ಭದಲ್ಲಿ ನನಗೆ ಸೇವೆ ಮಾಡುವ ಅವಕಾಶ ದೊರಕಿದ್ದು, ನಗರ ದೇವತೆ ಕೃಪೆ. ತಾಲ್ಲೂಕಾಡಳಿತ ಹಾಗೂ ಜನರ ಸಹಕಾರದಿಂದಾಗಿ ನನ್ನ ಕ್ಷೇತ್ರದ ಜನತೆ ಬಹಳಷ್ಟು ನೆಮ್ಮದಿಯಿಂದಿದ್ದಾರೆ ಎಂದು ಅವರು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಉಗ್ರಾಣ ನಿಗಮದ ಅಧ್ಯಕ್ಷ ಉಜಿನೇಶ ಬಣಕಾರ ಮಾತನಾಡಿ, ಜಿಲ್ಲೆಯ ಶಾಸಕರೇ ಮುಖ್ಯಮಂತ್ರಿಯಾ ಗಿದ್ದಾರೆ. ಇನ್ನೂ ಅಭಿವೃದ್ಧಿಯ ವೇಗ ಹೆಚ್ಚಲಿದೆ ಎಂದು ಹೇಳಿದರು.

ವೇದಿಕೆಯಲ್ಲಿ ಮುಖಂಡರಾದ ಎಸ್.ಎಸ್. ರಾಮಲಿಂಗಣ್ಣನವರ, ಮಂಗಳಗೌರಿ ಪೂಜಾರ, ಸಂತೋಷ ಪಾಟೀಲ, ಶಿವಲಿಂ ಗಪ್ಪ, ನಗರಸಭೆ, ಎಪಿಎಂಸಿ ಸದಸ್ಯರು, ಬಿಜೆಪಿ ಪದಾಧಿಕಾರಿಗಳು, ತಾಲ್ಲೂಕಿನ ಎಲ್ಲಾ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಕೊರೊನಾ ಟೆಸ್ಟ್ ಕಡ್ಡಾಯ

(1ನೇ ಪುಟದಿಂದ) ಪ್ರಕರಣಗಳನ್ನು ಪೂಲಿಂಗ್ ಮೂಲಕ ಪರೀಕ್ಷೆಗೊಳಪಡಿಸಬೇಕು. ಸಂಭಾವ್ಯ ಮೂರನೇ ಅಲೆಯಲ್ಲಿ ಮಕ್ಕಳು ಹೆಚ್ಚು ಬಾಧಿತರಾಗುತ್ತಾರೆ ಎಂಬ ಹಿನ್ನೆಲೆಯಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಇದಕ್ಕೂ ಮೊದಲು ಈ ವಯಸ್ಸಿನ ಮಕ್ಕಳಿಗೆ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡುತ್ತಿರಲಿಲ್ಲ. ಈ ವರ್ಗದವರಿಗೆ ಲಸಿಕೆ ನೀಡದ ಕಾರಣ ಹೆಚ್ಚು ನಿಗಾವಹಿಸಿ, ಮುಂಜಾಗ್ರತಾ ಕ್ರಮ ಕೈಗೊಳ್ಳಲು ಸರ್ಕಾರ ಇಂತಹ ತೀರ್ಮಾನ ಕೈಗೊಂಡಿದೆ ಎಂದು ಆರೋಗ್ಯ ಸಚಿವ ಡಿ. ಸುಧಾಕರ್ ತಮ್ಮ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಅಕ್ಟೋಬರ್ ನಲ್ಲಿ 3ನೇ ಅಲೆ ಬರುವ ನಿರೀಕ್ಷೆಯಯಲ್ಲಿ ಕಠಿಣ ತೀರ್ಮಾನಗಳನ್ನು ಕೈಗೊಳ್ಳುತ್ತಿದೆ. ಎರಡನೇ ಅಲೆಯಲ್ಲಾದ ಲೋಪ ದೋಷಗಳನ್ನು ಸರಿಪಡಿಸಿಕೊಂಡು ಸಾರ್ವಜನಿಕರ ಆರೋಗ್ಯ ರಕ್ಷಣೆಗಾಗಿ ಮುಖ್ಯಮಂತ್ರಿಗಳು ಹಿಂದಿನ ತಜ್ಞರ ಸಮಿತಿ ಮುಂದುವರೆಸಿದ್ದಾರೆ.

# ಮೂಲ ಅಗತ್ಯವಾದ ದ್ವಿಚಕ್ರದ ಮೇಲೆ ಐಷಾರಾಮಿ ತೆರಿಗೆ : ಟಿವಿಎಸ್ ಅಧ್ಯಕ್ಷ

ನವದೆಹಲಿ, ಆ. 25 - ಸಾರಿಗೆಯ ಮೂಲ ಅಗತ್ಯವಾಗಿರುವ ದ್ವಿಚಕ್ರ ವಾನಗಳ ಮೇಲೆ ಶೇ.28ರ ಅತಿ ಹೆಚ್ಚಿನ ಜಿ.ಎಸ್.ಟಿ. ವಿಧಿಸಲಾಗುತ್ತಿದೆ ಎಂದು ಟಿವಿಎಸ್ ಮೋಟರ್ ಕಂಪನಿಯ ಅಧ್ಯಕ್ಷ ವೇಣು ಶ್ರೀನಿವಾಸನ್ ಹೇಳಿದ್ದಾರೆ. ದ್ವಿಚಕ್ರ ವಾಹನಗಳ ಮೇಲೆ ವಿಧಿಸಲಾಗುತ್ತಿರುವ ತೆರಿಗೆ ಐಷಾರಾಮಿ ವಸ್ತುಗಳಿಗೆ ವಿಧಿಸುವ ತೆರಿಗೆಗೆ ಸಮನಾಗಿದೆ ಎಂದವರು ಬೇಸರ ವ್ಯಕ್ತಪಡಿಸಿದ್ದಾರೆ. ದೇಶದ ಆಟೋಮೊಬೈಲ್ ವಲಯ 3 ಕೋಟಿ ಜನರಿಗೆ ನೇರವಾಗಿ ಹಾಗೂ ಪರೋಕ್ಷವಾಗಿ ಉದ್ಯೋಗ ನೀಡುತ್ತಿದೆ.

ಈ ವಲಯ ಆಮದಿನಿಂದ ಹೊರ ಬಂದು ದೇಶೀಯವಾಗಿ ಅಭಿವೃದ್ಧಿಯಾಗಿದೆ. ಆದರೆ, ಆಟೋಮೊಬೈಲ್ ವಲಯ ಉದ್ಯೋಗ, ಆದಾಯ ಹಾಗೂ ವಿದೇಶಿ ವಿನಿಮಯ ಗಳಿಸುತ್ತಿರುವ ಪ್ರಮಾಣಕ್ಕೆ ಮಾನ್ಯತೆ ಸಿಗುತ್ತಿಲ್ಲ ಎಂದು ಶ್ರೀನಿವಾಸನ್ ಹೇಳಿದ್ದಾರೆ.

# ಸೆ.15ರ ಒಳಗೆ ಪಠ್ಯ ಪುಸ್ತಕ

(1ನೇ ಪುಟದಿಂದ) ಮಾಡಲಾಗಿದೆ. ಶೇ. 70ಕ್ಕೂ ಹೆಚ್ಚು ಪಠ್ಯ ಪುಸ್ತಕಗಳು ಮುದ್ರಣಗೊಂಡಿದ್ದು, ಸರಬರಾಜಿಗೆ ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ. ಆನ್‌ಲೈನ್‌ನಲ್ಲಿ ಪಠ್ಯ ಪುಸ್ತಕಗಳು ಲಭ್ಯವಿದ್ದು, ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದಿರುವ ಅವರು, ಮಕ್ಕಳ ಶಿಕ್ಷಣಕ್ಕೆ ರಾಜ್ಯ ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದಿದ್ದಾರೆ.

ಕೋವಿಡ್ ಸುರಕ್ಷತಾ ನಿಯಮಗಳನ್ನು ಪಾಲಿಸುತ್ತಾ ಎಲ್ಲಾ ಮಕ್ಕಳು ಶಾಲೆಗೆ ಬಂದು ಭೌತಿಕ ಶಿಕ್ಷಣ ಪಡೆಯಬೇಕು ಎಂದೂ ಸಚಿವರು ಹೇಳಿದ್ದಾರೆ.

9 ಹಾಗೂ 10ನೇ ತರಗತಿಯ ನೇರ ಬೋಧನೆಯನ್ನು ಸರ್ಕಾರ ಆರಂಭಿಸಿದೆ. ಆದರೆ, ಪಠ್ಯ ಪುಸ್ತಕಗಳನ್ನು ವಿತರಿಸಿಲ್ಲ ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಪಠ್ಯ ಪುಸ್ತಕ ನೀಡದೇ ಇರುವುದಕ್ಕೆ ಅತೃಪ್ತಿ ವ್ಯಕ್ತಪಡಿಸಿದ್ದ ಹೈಕೋರ್ಟ್, ಪುಸ್ತಕಗಳ ಪೂರೈಕೆ ಬಗ್ಗೆ ವಿವರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ತಿಳಿಸಿತ್ತು.

# ಪಿಂಚಣಿ ಹೆಚ್ಚಳ

(1ನೇ ಪುಟದಿಂದ) ಪಿಂಚಣಿ ಮಿತಿಗಳನ್ನು ತೆರವುಗೊಳಿಸ ಲಾಗಿದೆ. ಕೊನೆ ವೇತನದ ಶೇ.30ರಷ್ಟನ್ನು ಕುಟುಂಬ ಪಿಂಚಣಿಯಾಗಿ ನೀಡಲಾಗುವುದು ಎಂದು ಕೇಂದ್ರ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ದೇಬಶೀಶ್ ಪಾಂಡ ಹೇಳಿದ್ದಾರೆ.






# ಹರನಗಿರಿ ಗಣಿಗಾರಿಕೆ ಪರವಾನಿಗೆ ತಡೆಯದಿದ್ದರೆ ಹೋರಾಟ

ಹಾವೇರಿ, ಆ.25- ರಾಣೇಬೆನ್ನೂರು ತಾಲ್ಲೂಕಿನ ಹರನಗಿರಿ ಗ್ರಾಮದ ತುಂಗಭದ್ರಾ ನದಿ ತೀರದಲ್ಲಿ ಮರಳು ಗಣಿಗಾರಿಕೆಗೆ ನೀಡಲು ಉದ್ದೇಶಿಸಿರುವ ಪರವಾನಿಗೆಯನ್ನು, ರೈತರ ಹಾಗೂ ಸಾರ್ವಜನಿಕರ ಪರಿಸರದ ಹಿತದೃಷ್ಟಿಯಿಂದ ತಡೆಹಿಡಿಯಬೇಕು ಎಂದು ಕರ್ನಾಟಕ ರೈತ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಎಫ್. ಪಾಟೀಲ ಆಗ್ರಹಿಸಿದ್ದಾರೆ.

ಎಲ್ಲಾ ಸಂಘಟನೆಗಳೊಂದಿಗೆ ಇಲ್ಲಿನ ಜಿಲ್ಲಾಡಳಿತ ಭವನಕ್ಕೆ ತೆರಳಿ, ಜಿಲ್ಲಾಧಿಕಾರಿಗಳ ಅನುಪಸ್ಥಿತಿಯಲ್ಲಿ ಅಪರ ಜಿಲ್ಲಾಧಿಕಾರಿ ಯೋಗೀಶ್ವರ್ ಅವರಿಗೆ ಮನವಿ ಅರ್ಪಿಸಿ ಅವರು ಮಾತನಾಡಿದರು.



ಇತ್ತೀಚಿಗೆ ಇಟಗಿ-ಮುದೇ ನೂರು ರಸ್ತೆಯಲ್ಲಿ ಮರಳು ತುಂಬಿದ ಟಿಪ್ಪರ್‌ನಿಂದ ಆದ ಅಪಘಾತದಲ್ಲಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟು ಈ ಕುಟುಂಬವು ಸರ್ವ ನಾಶವಾಗಿದ್ದು, ಈ ಘಟನೆ ಮರಳು ಗಣಿಗಾರಿಕೆ ಪ್ರದೇಶದ ಜನರ ನಿದ್ದೆ ಗೆಡಿಸಿದೆ. ಇದೇ ರೀತಿ ಹರನಗಿರಿ, ಕುದುರೆಹಾಳ ಭಾಗದಲ್ಲಿ ಅಪಘಾತ ವಾಗಿ ಅನೇಕ ಜನರು ಜೀವ ಕಳೆದುಕೊಂಡಿದ್ದಾರೆ ಎಂದು ಮನವಿ ಪತ್ರದಲ್ಲಿ ಅವರು ಜಿಲ್ಲಾಧಿಕಾರಿಗಳ ಗಮನ ಸೆಳೆದಿದ್ದಾರೆ.

ಈ ಸಂದರ್ಭದಲ್ಲಿ ಹೋರಾಟಗಾರರಾದ ಬಸವ ರಾಜ ಕೊಂಗಿಯವರ, ಎಸ್.ಡಿ ಹಿರೇಮಠ, ಡಿಳ್ಳೆಪ್ಪ ಸತ್ಯಪ್ಪನವರ, ರಾಜು ಮಾದಮ್ಮನವರ, ಸುರೇ ಶಪ್ಪ ಗರಡಿಮನಿ, ಹರಿಹರಗೌಡ ಪಾಟೀಲ, ಎಲ್ಲರೆಡ್ಡಿ ಎರೇಕುಪ್ಪಿ, ಜಮಾಲ್‌ಸಾಬ್ ಸೇತಸಂದಿ ಇನ್ನಿತರರಿದ್ದರು.

# ಭೋಪಾಲ್‌ನಲ್ಲಿ ಬಂಧಿತರಾದ ಪ್ರತಿಭಟನಾಕಾರರ ಬಿಡುಗಡೆಗೆ ಮನವಿ



ದಾವಣಗೆರೆ, ಆ.25- ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಉದ್ಯೋಗಕ್ಕಾಗಿ ಪ್ರತಿಭಟನೆ ನಡೆಸಿದ ಯುವ ಜನರ ಮೇಲೆ ನಡೆದ ಪೊಲೀಸ್ ದೌರ್ಜನ್ಯವನ್ನು ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ) ಜಿಲ್ಲಾ ಘಟಕ ವಿರೋಧಿಸಿದೆ.

ಬಂಧಿತ ಪ್ರತಿಭಟನಾ ನಿರತರ ಬಿಡುಗಡೆಗೆ ಒತ್ತಾಯಿಸಿ, ಸಂಘಟನೆಯ ಪದಾಧಿಕಾರಿಗಳು ಇಂದು ನಗರದ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್‌ಗೆ ಮನವಿ ನೀಡುವ ಮೂಲಕ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮುಖಾಂತರ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಮಧ್ಯ ಪ್ರದೇಶದಲ್ಲಿ ನಿರುದ್ಯೋಗ ವಿರೋಧಿ ಹೋರಾಟ ಸಮಿತಿ ಮತ್ತು ಎಐಡಿವೈಓ ಸಂಘಟನೆಗಳು ಕಳೆದ ಹಲವು ವರ್ಷಗಳಿಂದ ಉದ್ಯೋಗಕ್ಕಾಗಿ ಚಳುವಳಿಯನ್ನು ಬೆಳೆಸುತ್ತಿವೆ. ಅದರ ಒಂದು ಭಾಗವಾಗಿ, ಭೋಪಾಲ್‌ನ ರೋಷನ್‌ಪುರ ಜಂಕ್ಷನ್‌ನಲ್ಲಿ ಬುಧವಾರ ರಾಜ್ಯ ಮಟ್ಟದ ಪ್ರತಿಭಟನಾ ಪ್ರದರ್ಶನವನ್ನು ಸಂಘಟಿಸಲಾಗಿತ್ತು. ಪ್ರತಿಭಟನಾ ನಿರತರ ಮೇಲೆ ಅಲ್ಲಿನ ಪೊಲೀಸರು ಅನಾಗರಿಕವಾಗಿ ಲಾಠಿ ಚಾರ್ಜ್ ಮಾಡಿದ್ದಾರೆ. ಎಐಡಿವೈಓನ ರಾಜ್ಯ ಸಮಿತಿಯ ಕೆಲ ಪದಾಧಿಕಾರಿಗಳು ಸೇರಿದಂತೆ ನೂರಾರು ಯುವಕರು ಲಾಠಿ ಚಾರ್ಜ್‌ನಿಂದಾಗಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರಲ್ಲಿ ಕೆಲವರ ಮೇಲೆ ಪ್ರಕರಣ ದಾಖಲಿಸಿ, ಜೈಲಿಗೆ ಕಳುಹಿಸಲಾಗಿದೆ ಎಂದು ಜಿಲ್ಲಾ ಸಂಘಟನೆ ಪದಾಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ವೇಳೆ ಎಐಡಿವೈಓ ಜಿಲ್ಲಾಧ್ಯಕ್ಷ ಪರಶುರಾಮ್, ಸಂಘಟನಾಕಾರರಾದ ಗುರುಪ್ರಸಾದ್, ಶಶಿಕುಮಾರ್, ಅನಿಲ್‌ಕುಮಾರ್ ಇದ್ದರು.

# ದಾವಣಗೆರೆ ಜಿಲ್ಲಾ ಸಾರ್ವಜನಿಕ ಹಿತರಕ್ಷಣಾ ಒಕ್ಕೂಟಕ್ಕೆ ಆಯ್ಕೆ

ದಾವಣಗೆರೆ, ಆ.25- ಜಿಲ್ಲಾ ಸಾರ್ವಜನಿಕ ಹಿತರಕ್ಷಣಾ ಒಕ್ಕೂಟದ ನೂತನ ಅಧ್ಯಕ್ಷರಾಗಿ ಬಿ.ವಿ. ರಾಜಶೇಖರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗೌರವಾಧ್ಯಕ್ಷರಾಗಿ ಹೆಚ್. ಜಯಪ್ಪ, ಉಪಾಧ್ಯಕ್ಷರುಗಳಾಗಿ ಕಾಯಿಪೇಟೆ ಹಾಲೇಶ್, ಎಂ.ಎನ್. ಪ್ರಭುಕುಮಾರ್ ಗೌಡ್ರು, ಎ.ಎನ್. ರವಿ (ಬ್ರಹ್ಮ), ಕೆ.ಎಂ. ಕರಿಬಸಯ್ಯ, ಹೆಚ್.ಸಿ. ಗುಡ್ಡಪ್ಪ, ಪ್ರಧಾನ ಕಾರ್ಯದರ್ಶಿ ಡಾ. ಕೆ. ಎಸ್. ಗಂಗಾಧರ್, ಕಾರ್ಯದರ್ಶಿಗಳು ವಿ. ಶಿವಮೂರ್ತಿ ಸ್ವಾಮಿ, ಎನ್. ಎಸ್. ಶಿವಕುಮಾರ್, ಸಹ ಕಾರ್ಯದರ್ಶಿಗಳು ಅನಿಲ್ ವಿ. ಪಾಲನ್‌ಕರ್, ಎಸ್.ಎಂ. ಪ್ರಭಾಕರ್, ಶಿವಣ್ಣ ಸೀತಾಮನೆ, ಪಿ. ಮಂಜುನಾಥ್, ಕೋಶಾಧ್ಯಕ್ಷ ಡಾ. ಎಂ. ಸುರೇಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘಟನಾ ಕಾರ್ಯದರ್ಶಿಗಳಾಗಿ ಮಲ್ಲಿಕಾರ್ಜುನ ಕಟ್ಟಿಮನೆ, ಎನ್. ಎಸ್. ಗದಿಗೆಪ್ಪ, ಸಂಚಾಲಕರುಗಳು ಪಿ.ಎ. ನಾಗರಾಜ್, ಡಾ. ಬಿ.ವಿ. ಧನಂಜಯಮೂರ್ತಿ, ಕಾಶೀಪುರದ ನಿಜಲಿಂಗಪ್ಪ, ಮಟ್ಟಿಕಲ್ ವೀರಭದ್ರಸ್ವಾಮಿ, ಪತ್ರಿಕಾ ಕಾರ್ಯದರ್ಶಿಗಳಾಗಿ ಪಿ. ಶಿವಕುಮಾರ್, ಜೆ. ಎಸ್. ವೀರೇಶ್,ದಾವಣಗೆರೆ ಟೈಮ್ಸ್, ಕಾನೂನು ಸಲಹೆಗಾರರಾಗಿ ಎನ್. ಎಂ. ಆಂಜನೇಯ, ಕೆ. ಇಬ್ರಾಹಿಂ ಖಲೀಲ್‌ವುಲ್ಲಾ ಆಯ್ಕೆಗೊಂಡಿದ್ದಾರೆ.


ನಿರ್ದೇಶಕರುಗಳಾಗಿ ವಿ. ತಿರುಮಲೇಶ್, ಕೆ.ಎಂ. ವೀರೇಶ್, ವೈ. ರಾಮು, ಎಂ.ಹೆಚ್. ನಿಂಗಪ್ಪ, ಎಸ್.ಎಂ. ಚರಂತಿಮಠ್, ಹೆಚ್. ನಾಗರಾಜ್, ಸುರೇಶ್ ಭೂತೆ, ಬಿ.ಎಸ್. ಚನ್ನಬಸಪ್ಪ, ಡಾ. ರುದ್ರಮುನಿ ಹಿರೇಮಠ್, ವೀರಭದ್ರಿ, ಎಸ್. ಸಂಗನಗೌಡ, ಬೇಕರಿ ಶ್ರೀನಿವಾಸ್, ಶಿವಾನಂದ ಬೆನ್ನೂರು, ವಿ. ಸುರೇಶ್, ಎಂ. ಬನ್ನಯ್ಯ ಸ್ವಾಮಿ, ಅರ್ಜುನ್ ಸಾ. ಪವಾರ್ ಆಯ್ಕೆಯಾಗಿದ್ದಾರೆ.

# ಚನ್ನಗಿರಿ : ಡಿಪ್ಲೋಮಾ ಕೋರ್ಸ್‌ಗೆ ಅರ್ಜಿ

ಚನ್ನಗಿರಿ, ಆ.25- ಚನ್ನಗಿರಿ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ ನೇರ ಪ್ರವೇಶ ಕಲ್ಪಿಸಲಾಗಿದೆ.

ಆಟೋಮೊಬೈಲ್ ಇಂಜಿನಿಯರಿಂಗ್ ಹಾಗೂ ಆಲ್ಟರ್‌ನೇಟ್ ಎನರ್ಜಿ ಟೆಕ್ನಾಲಜಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಇದೇ ದಿನಾಂಕ 31 ಕೊನೆಯ ದಿನವಾಗಿದೆ. ವಿವರಕ್ಕೆ ವಿಶೇಷಾಧಿಕಾರಿ ಚಿಕ್ಕಕರಿಯಪ್ಪ (90194 28506) ಅವರನ್ನು ಸಂಪರ್ಕಿಸಬಹುದು.

# ಹಡಗಲಿ : ಚಿನ್ನದ ಅಂಗಡಿ ಬಂದ್



ಹೂವಿನಹಡಗಲಿ, ಆ.25- ಕೇಂದ್ರ ಸರ್ಕಾರವು ಒಡವೆಗಳ ಮೇಲೆ ಹಾಲ್‌ಮಾರ್ಕ್ ಮತ್ತು ಹೆಚ್‌ಯುಐಡಿ ಕಡ್ಡಾಯ ಮಾಡಿರುವುದನ್ನು ವಿರೋಧಿಸಿ, ತಾಲ್ಲೂಕಿನ ಜ್ಯೂಯಲರ್ಸ್ ಅಸೋಸಿಯೇಷನ್ ವತಿಯಿಂದ ಮೊನ್ನೆ ಎಲ್ಲಾ ಚಿನ್ನ-ಬೆಳ್ಳಿ ಅಂಗಡಿಗಳನ್ನು ಬಂದ್ ಮಾಡಲಾಗಿತ್ತು. ವರ್ತಕರು ಹಾಲ್‌ಮಾರ್ಕ್ ಅನ್ನು ಸ್ವಾಗತಿಸಿ, ಬಹಳಷ್ಟು ಪ್ರಾಕ್ಟಿಕಲ್ ತೊಂದರೆಗಳಿರುವುದರಿಂದ ಹೆಚ್‌ಯುಐಡಿಯನ್ನು ವಿರೋಧಿಸುವುದಾಗಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.


**ಶಿಕ್ಷಕಿಯರು ಬೇಕಾಗಿದ್ದಾರೆ**
B.A B.Ed - 2 (Social)
B.A B.Ed - 2 (English)
B.Sc - 2
ಮೌಂಟ್ ಎವರೆಸ್ಟ್ ವಿದ್ಯಾಲಯ
ಜಯನಗರ, ನಿಟುವಳ್ಳಿ, ದಾವಣಗೆರೆ.
91136-10789
97439-24203

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
50x80 East, 40x60 East, 40x60 North, 40x60 West, 40x60 Corner 40x40 Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ವಿದ್ಯಾನಗರ ಬನಶಂಕರಿ ಲೇಔಟ್ ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x60 East, 60x46 East, 30x50, 30x50 west ಅಕ್ಕ-ಪಕ್ಕ, 30x40, 30x40 West ಅಕ್ಕ-ಪಕ್ಕ, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**WANTED**
Girls required for data entry work at Food Mart Supermarket.
Quli: B.Com, Any Degree
Mob: 98864 63531

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. ಹೈಟೆಕ್ ಬಡಾವಣೆ ಪಶ್ಚಿಮ 30x50, ಭೂಮಿಕಾ ಬಡಾವಣೆ, ದಕ್ಷಿಣ 20x30 (ಕೆಳಗೆ ಮನೆ ಮೇಲೆ ಮನೆ) ಶಿವ ಪಾರ್ವತಿ ಬಡಾವಣೆ ಪಶ್ಚಿಮ 30x46 ಕೆಳಗೆ ಮನೆ ಮೇಲೆ ಮನೆ.
ಐಗೂರು ವಿಜಯಕುಮಾರ್
99457-02495

**5000 SQ.FT. BUILDING AVAILABLE**
for rent in P J Extension. Suitable for hospital/ offices. Contact :
94480 28103

**ಮನೆಗಳು ಮಾರಾಟಕ್ಕಿವೆ**
40x60 North 3 ಬೆಡ್ ರೂಂ ಮನೆ, ಕುವೆಂಪು ಬಡಾವಣೆಯಲ್ಲಿ, 40x60 West ಹೊಸ ಮನೆ, 4 ಬೆಡ್‌ರೂಂ ಮನೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ ಪೂರ್ವ 30x50 ಅಕ್ಕ-ಪಕ್ಕ, 40x65 ಅಕ್ಕ-ಪಕ್ಕ, 40x38 ಅಕ್ಕ-ಪಕ್ಕ, 30x40 ಪಶ್ಚಿಮ, 30x40, 40x30 ಡಾಲರ್ಸ್ ಕಾಲೋನಿ ಉತ್ತರ 30x53, ದಕ್ಷಿಣ 30x40
ಐಗೂರು ವಿಜಯಕುಮಾರ್
99457-02495

**ಬಾಡಿಗೆಗೆ**
ಬಂಬೂಬಜಾರ್ ಹಿಂಭಾಗ, ಬಸಾಪುರ ರಸ್ತೆಯಲ್ಲಿ 22×55 ಅಳತೆಯ ಎರಡು ಮಳಿಗೆ (ಗೋಡೌನ್)ಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
94480 28103

**SALES & MARKETING**
Sales & Marketing ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ. ವಯೋಮಿತಿ - 20 ರಿಂದ 30 ವರ್ಷ ಒಳಗೆ. ಸುವಿ ಇಂಡಸ್ಟ್ರೀಸ್, ಕರೂರ್ ಇಂಡಸ್ಟ್ರೀಯಲ್ ಏರಿಯಾ ದಾವಣಗೆರೆ.
96206 38679

**ಜಮೀನು ಮಾರಾಟಕ್ಕಿದೆ.**
ಬನ್ನಿಕೋಡು ಹತ್ತಿರ @ Rs 25 Lacks/ Acres
74112 50447

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಭಟ್ಟರು ಮತ್ತು ಹುಡುಗರು ಬೇಕಾಗಿದ್ದಾರೆ.
ಊಟ ಮತ್ತು ವಸತಿ ಇರುತ್ತದೆ.
ಅಣ್ಣಯ್ಯ ಹೋಟೆಲ್
ಐ.ಟಿ.ಐ ಗೇಟ್ ಹತ್ತಿರ ದಾವಣಗೆರೆ.
ವೀರೇಶ್ : 78928 34945

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**Rooms for Ladies PG**
24 hours hot and cold water. Attached bathroom and toilet.
Rs. 1500/- per month.
Call: 98440 61464

**ಮಾರಾಟಕ್ಕೆ**
* ಸಿದ್ದವೀರಪ್ಪ ಬಡಾವಣೆ ಸೈಟ್ (ಉತ್ತರ) 30x40. * ದೇವರಾಜ ಅರಸು ಬಡಾವಣೆ ಸೈಟ್ (ದಕ್ಷಿಣ) 30x53. * ಶಾಮನೂರು (ಶಿವ ಪಾರ್ವತಿ) ಸೈಟ್ (ಪೂರ್ವ) 30x34. * ಶಾಮನೂರು (ಆಶೀರ್ವಾದ ಲೇಔಟ್) ಸೈಟ್ (ಪೂರ್ವ) 30x55.
78996-36597, 99165-25828

**ಬೇಕಾಗಿದ್ದಾರೆ**
HEPS ಬೋಧನೆ ಮಾಡಲು ಉಪನ್ಯಾಸಕರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಶ್ರೀ ಲಕ್ಷ್ಮೀನಾರಾಯಣ ಪದವಿ ಪೂರ್ವ ಕಾಲೇಜು
ಯರಗುಂಟೆ, ಹೊಸ ಬಡಾವಣೆ, ಕೊಂಡಜ್ಜಿ ರಸ್ತೆ, ದಾವಣಗೆರೆ
ಮೊ.88924-86388, 99644-89761

**WANTED**
CRE MANAGERS FOR BANKING SECTOR
WORK FROM HOME
SALARY - 8-15 K
NO SALES NO TARGET
Ladies & Gents, Part-Full time
90357 12217

**NGO-ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ**
MEGHANA ASSOCIATES (R)
99809 16126

**GST Registration-Retturns Filing INCOME TAX & GST CASE, Project Reports and for Accounts Maintenances**
Contact
MEGHANA ASSOCIATES (R)
99809 16126

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್ ನಲ್ಲಿ TATA ACE Driver ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ :
ಮೊ. 94807-95548

**ದೂಡಾ ನಿವೇಶನಗಳಿಗೆ ಅರ್ಜಿ**
ದಾವಣಗೆರೆ ದೂಡಾ ನಿವೇಶನಗಳಿಗೆ ಅರ್ಜಿ ಹಾಕಲು ಸಂಪರ್ಕಿಸಿ.
ಕೊನೆಯ ದಿನಾಂಕ 04.09.2021
77607 71714
95387 71714

**ತಕ್ಷಣ ಯುವಕ- ಯುವತಿಯರು ಬೇಕಾಗಿದ್ದಾರೆ**
Tele Marketing ಯುವತಿಯರಿಗೆ ರೂ.7000, ಫೀಲ್ಡ್ ವರ್ಕ್ ಯುವಕರಿಗೆ ರೂ.12,000 ಬೈಕ್ ಇದ್ದವರಿಗೆ ಆದ್ಯತೆ.
ಎಸ್. ಎಸ್. ಎಂಟರ್‌ಪ್ರೈಸಸ್.
9148734420, 7899951681
8548901454, 7899296668

**ಹುಡುಗರು ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 20 ರಿಂದ 40 ವರ್ಷ ವಯಸ್ಸಿನ ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಲೈಸೆನ್ಸ್ ಹೊಂದಿರುವವರಿಗೆ ಆದ್ಯತೆ.
73380 33337

**WANTED TEACHERS**
For English Medium High School
B.Sc., B.Ed (Maths, Physics)
Contact
90084 75425

**TEACHERS REQUIRED**
Hindi, English and Social Science.Interested Candidates can contact us
EURO SCHOOL
Naganur Road Shamanur, Davangere
94488 31323, 95130 88330

**ಹೊಸ ಮನೆ ಮಾರಾಟಕ್ಕಿದೆ**
ಸಿದ್ದಗಂಗಾ ಬಡಾವಣೆ, ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗ 30x40 ಅಳತೆಯ ಉತ್ತರಕ್ಕೆ ಮುಖವಿರುವ ಹೊಸ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
94489 23785
95359 67499

**ಬಾಡಿಗೆಗೆ ಇದೆ**
ಶಾಮನೂರು ರಸ್ತೆ ಬೂಸ್ನೂರು ಸ್ಕೂಲ್ ಪಕ್ಕ ಡೋರ್ ನಂ.5378, 2ನೇ ಮಹಡಿಯಲ್ಲಿ 800 ಚದರ ಅಡಿ ಇರುವ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ
90604 24161, 81235 05430
96117 66451

**ಬಾಡಿಗೆಗೆ ಇದೆ**
15 ರೂಂಗಳು ಹಾಗೂ ಊಟದ ಹಾಲ್ (ಹಾಸ್ಟೇಲ್‌ಗೆ ಸೂಕ್ತವಾದ ) ಬಾಡಿಗೆಗೆ ದೊರೆಯುತ್ತದೆ. ಸರಸ್ವತಿ ಬಡಾವಣೆ ಕೆನರಾಬ್ಯಾಂಕ್ ಹತ್ತಿರ ನಿಟುವಳ್ಳಿ. ದಾವಣಗೆರೆ. ಸಂಪರ್ಕಿಸಿ
81055 42689

**ಶಿಕ್ಷಕಿಯರು ಬೇಕಾಗಿದ್ದಾರೆ**
ವಿದ್ಯಾರ್ಹತೆ : BA/PUC - NTC - 4 ಶಿಕ್ಷಕಿಯರು.
ವಿದ್ಯಾರ್ಹತೆ : BA/ PUC - D.Ed - 4 ಶಿಕ್ಷಕಿಯರು.
ಜ್ಞಾನದೀಪ ಪಬ್ಲಿಕ್ ಸ್ಕೂಲ್
ರಿಂಗ್ ರಸ್ತೆ, ನಿಟುವಳ್ಳಿ, ದಾವಣಗೆರೆ-577004.
ಸಂಪರ್ಕಿಸಿ : 94496-79346
78291-92159

**LADY TEACHERS REQUIRED**
B.Sc B.Ed (PCM), B.A B.Ed (ENGLISH), D.Ed-03, Clerk - B. Com with Computer Knowledge
Contact Immedietely
95356 10817
88920 07561

**ವಾರದ ಚೀಟಿ ಪ್ರಾರಂಭ**
ರೂ.1 ಲಕ್ಷದ ಚೀಟಿ ಪ್ರಾರಂಭ
50 ವಾರಗಳು & 50 ಸದಸ್ಯರು
2000/- ರೂ ಕಂತು ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ)
84531 61869

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಬಾತಿ-ಹರಿಹರ, NH-4 ರಸ್ತೆಗೆ
74112 50447

**2BHK ಮನೆ ಬಾಡಿಗೆಗೆ**
ಎಂ.ಸಿ.ಸಿ. 'ಬಿ' ಬ್ಲಾಕ್ (ಸುಕ್ಷೇಮ ಆಸ್ಪತ್ರೆಯ ಪಕ್ಕ) ಕುವೆಂಪು ನಗರ 1ನೇ ಕ್ರಾಸ್, ಡೋರ್ ನಂ. 3370/6A ಕಲ್ಲೇಶ್ವರ ಕೃಪೆ, ಮೊದಲನೇ ಮಹಡಿ, ಬೋರ್, ಮುನ್ಸಿಪಲ್ ನೀರಿನ ಸೌಕರ್ಯವಿರುವ ಮನೆ
80950 01636
98866 61564

**ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
EICHER Tractor Show Room
ITI, Diploma ಅಭ್ಯರ್ಥಿಗಳು ಬೇಕಾಗಿದ್ದಾರೆ. ಡಿ.ಎಲ್ ಮತ್ತು ಬೈಕ್ ಇದ್ದವರಿಗೆ ಆದ್ಯತೆ.
ಶಾರದಾ ಆಟೋಸ್ ದಾವಣಗೆರೆ.
sharadaautosdavanagere@gmail.com
63646 76457

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಪ್ರಸಿದ್ಧ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು
ಮಾರಾಟ ಪ್ರತಿನಿಧಿಗಳು
(Sales Executives)
ತಕ್ಷಣ ಬೇಕಾಗಿದ್ದಾರೆ
ಆಸಕ್ತರು ಈ ಕೆಳಗಿನ ನಂಬರ್‌ಗೆ ಕರೆ ಮಾಡಿ ಅಥವಾ ತಮ್ಮ ಬಯೋಡೇಟಾವನ್ನು ವಾಟ್ಸಾಪ್ ಅಥವಾ ಕೆಳಗಿನ ಮೇಲ್ ಐಡಿಗೆ ಕಳುಹಿಸಿ.
93803 50327
davanagerejobs@gmail.com

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ**
ಹೊಳೆಸಿರಿಗೆರೆ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ
ಟೆಂಡರ್ ಸಂಖ್ಯೆ : PACS / WH1/2021-22 Phone : 9980562627
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಹೊಳೆಸಿರಿಗೆರೆ ಕಛೇರಿಗೆ ವಾಣಿಜ್ಯ ಸಂಕೀರ್ಣ ಮಳಿಗೆ ಕಟ್ಟಡದ ನಿರ್ಮಾಣಕ್ಕಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕಾನೂನು ರೀತ್ಯ ನೊಂದಣೆಯಾದ ಎಲ್ಲಾ ದಾಖಲೆಗಳನ್ನು ತಾಂತ್ರಿಕ ಲಕೋಟೆ ಹಾಗೂ ಆರ್ಥಿಕ ಲಕೋಟೆಯಲ್ಲಿಟ್ಟು ಸೀಲ್ಡ್ ಮಾಡಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಹೊಳೆಸಿರಿಗೆರೆ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ. ಇವರಿಗೆ ದಿನಾಂಕ: 31.08.2021 ರ ಸಂಜೆ 4.30 ರೊಳಗೆ ಸಲ್ಲಿಸುವುದು. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 01.09.2021ರ ಮಧ್ಯಾಹ್ನ 3 ಘಂಟೆಗೆ ತೆರೆಯಲಾಗುವುದು. ಟೆಂಡರ್‌ನ ಅಂದಾಜು ಮೊತ್ತ ರೂ. 43.15 ಲಕ್ಷಗಳು, ಇ.ಎಂ.ಡಿ ಮೊತ್ತ ರೂ. 215750/-ಗಳನ್ನು ಕಾರ್ಯನಿರ್ವಹಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಹೊಳೆಸಿರಿಗೆರೆ. ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ ಪಡೆದು ಟೆಂಡರ್ ದಸ್ತಾವೇಜು ಜೊತೆಗೆ ಸಲ್ಲಿಸುವುದು. ಷರತ್ತು ಹಾಗೂ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಹೊಳೆಸಿರಿಗೆರೆ, ಇವರ ದೂರವಾಣಿ ಸಂಖ್ಯೆ : 9980562627 ಇವರನ್ನು ಸಂಪರ್ಕಿಸುವುದು.
ಸಹಿ/- ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಹೊಳೆಸಿರಿಗೆರೆ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

**Hombal e-Mart**
ಹೋಟೆಲ್‌ಗಳಿಗೆ ಮಿನಿ ವೆಜಿಟಬಲ್ ಶಾಪ್‌ಗಳಿಗೆ ತರಕಾರಿ ಮಂಡಿ ಬೆಲೆಯಲ್ಲಿಯೇ ತಾಜಾ ತರಕಾರಿಗಳನ್ನು ಡೋರ್ ಸ್ಟೆಪ್‌ಗೆ ಪಡೆಯಲು ಆರ್ಡರ್ ಮಾಡಿ.
87478 97209

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**ಮನೆ ಬಾಡಿಗೆಗೆ/ಲೀಸ್‌ಗೆ**
2 ಬೆಡ್‌ರೂಮ್ ಕಾರ್ಪೋರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್ , ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ
93410 12022

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ (ಶಿವಗಂಗೆ ಕಲ್ಯಾಣ ಮಂಟಪ ಹಿಂಭಾಗ) ಪೂರ್ವ - ಪಶ್ಚಿಮ 30x40, ದಕ್ಷಿಣ 40x60, 30x50, ಕುಂದುವಾಡ ಕೆರೆ ಪಕ್ಕ ದಕ್ಷಿಣ 30x47 ಅಕ್ಕ-ಪಕ್ಕ, ಬಾಲಾಜಿ ಲೇಔಟ್ ಪೂರ್ವ 40x60.
ಐಗೂರು ವಿಜಯಕುಮಾರ್
99457-02495

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಡಾಲರ್ಸ್ ಕಾಲೋನಿಯಲ್ಲಿ 30/57+56=1695 ಅಳತೆಯ ನಿವೇಶನ ಮಾರಾಟಕ್ಕಿದೆ. (ದಕ್ಷಿಣ ಮುಖ) 100% ಸರಿಯಾದ ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ಅಗತ್ಯ ದಾಖಲೆಗಳಿವೆ.
99006 37763

**ಬೇಕಾಗಿದ್ದಾರೆ**
ದಾವಣಗೆರೆ ಸುತ್ತ-ಮುತ್ತ ಆವರಗೆರೆ, ಅರಸೀಕೆರೆ ಮತ್ತು ಕಲ್ಪನಹಳ್ಳಿಯಲ್ಲಿ ಸೆಕ್ಯೂರಿಟಿ ಹಾಗೂ ಲಾಡ್ಜ್ ರಿಸೆಪ್ಷನಿಸ್ಟ್, ರೂಂ ಬಾಯ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ. ಆಕರ್ಷಕ ಸಂಬಳವಿರುತ್ತದೆ.
74113 07071
82177 93007, 98806 48207

**ಮನೆಗಳು ಲೀಜ್‌ಗೆ/ ಬಾಡಿಗೆಗಿವೆ**
ನಗರದ ಹೃದಯಭಾಗ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್ 2ನೇ ಮೇನ್, 2ನೇ ಕ್ರಾಸ್ ನಲ್ಲಿ ಡಬಲ್ ಬೆಡ್ ರೂಂ, ಬೋರ್ ವೆಲ್/ ಕಾರ್ಪೋರೇಷನ್ ನೀರಿನ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಇರುವ ಸುಸಜ್ಜಿತ 1 & 2ನೇ ಮಹಡಿ, ಪೂರ್ವ ಬಾಗಿಲು ಇರುವ ಮನೆಗಳು ಇವೆ.
97417 46205, 84312 55250
99022 99961

**ರೊಟ್ಟಿ, ಚಪಾತಿ ಮಾಡಲು ಬೇಕಾಗಿದ್ದಾರೆ**
ರೊಟ್ಟಿ, ಚಪಾತಿ ಮತ್ತು ಕ್ಲೀನಿಂಗ್ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಸಂಪರ್ಕಿಸಿ :
ಶ್ರೀ ಬಸವೇಶ್ವರ ಖಾನಾವಳಿ
ರಾಯ್ಕರ್ ಜ್ಯೂಯಲರ್ಸ್ ಎದುರು, ಚರ್ಚ್ ರಸ್ತೆ, ರಾಂ ಅಂಡ್ ಕೋ ಸರ್ಕಲ್ ಹತ್ತಿರ, ದಾವಣಗೆರೆ.
ಮೊ. 94487 25286

**AVOID MOSQUITOES**
Mosquito Net For Doors & Windowes. Design Boards, ACP, MDF Available.
SRI GOWRI ENTERPRISES
# 7, 4th Cross, Karur Industrial Area. Davangere-6
72049 94628

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**VS Paramedical College**
SSLC ಪಾಸ್/PUC ಪಾಸ್/ಫೇಲ್
Course (DHI)
DIPLOMA HEALTH INSPECTOR
ಕೆಲವೇ ಸೀಟುಗಳು ಮಾತ್ರ
SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ .
9019580600, 8553278258

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ**
ಗೋಣಿವಾಡ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ
ಟೆಂಡರ್ ಸಂಖ್ಯೆ : PACS / SC1/21-22 Phone : 98808 28413
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಗೋಣಿವಾಡ ಕಛೇರಿಗೆ ವಾಣಿಜ್ಯ ಸಂಕೀರ್ಣ ಮಳಿಗೆ ಕಟ್ಟಡದ ನಿರ್ಮಾಣಕ್ಕಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕಾನೂನು ರೀತ್ಯ ನೋಂದಣಿಯಾದ ಎಲ್ಲಾ ದಾಖಲೆಗಳನ್ನು ತಾಂತ್ರಿಕ ಲಕೋಟೆ ಹಾಗೂ ಆರ್ಥಿಕ ಲಕೋಟೆಯಲ್ಲಿಟ್ಟು ಸೀಲ್ಡ್ ಮಾಡಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಗೋಣಿವಾಡ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ. ಇವರಿಗೆ ದಿನಾಂಕ: 31.08.2021 ರ ಸಂಜೆ 4.30 ರೊಳಗೆ ಸಲ್ಲಿಸುವುದು. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 01.09.2021ರ ಮಧ್ಯಾಹ್ನ 3 ಘಂಟೆಗೆ ತೆರೆಯಲಾಗುವುದು. ಟೆಂಡರ್‌ನ ಅಂದಾಜು ಮೊತ್ತ ರೂ. 8.50 ಲಕ್ಷಗಳು, ಇ.ಎಂ.ಡಿ ಮೊತ್ತ ರೂ. 42,500/-ಗಳನ್ನು ಕಾರ್ಯನಿರ್ವಹಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಗೋಣಿವಾಡ. ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ ಪಡೆದು ಟೆಂಡರ್ ದಸ್ತಾವೇಜು ಜೊತೆಗೆ ಸಲ್ಲಿಸುವುದು. ಷರತ್ತು ಹಾಗೂ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಗೋಣಿವಾಡ, ಇವರ ದೂರವಾಣಿ ಸಂಖ್ಯೆ : 9880828413 ಇವರನ್ನು ಸಂಪರ್ಕಿಸುವುದು.
ಸಹಿ/- ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಗೋಣಿವಾಡ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ**
ಚಟ್ನಿಹಳ್ಳಿ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ
ಟೆಂಡರ್ ಸಂಖ್ಯೆ : PACS / WH3/2021-22 Phone : 9902694461
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಚಟ್ನಿಹಳ್ಳಿ ಕಛೇರಿಗೆ ವಾಣಿಜ್ಯ ಸಂಕೀರ್ಣ ಮಳಿಗೆ ಕಟ್ಟಡದ ನಿರ್ಮಾಣಕ್ಕಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕಾನೂನು ರೀತ್ಯ ನೋಂದಣಿಯಾದ ಎಲ್ಲಾ ದಾಖಲೆಗಳನ್ನು ತಾಂತ್ರಿಕ ಲಕೋಟೆ ಹಾಗೂ ಆರ್ಥಿಕ ಲಕೋಟೆಯಲ್ಲಿಟ್ಟು ಸೀಲ್ಡ್ ಮಾಡಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಚಟ್ನಿಹಳ್ಳಿ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ. ಇವರಿಗೆ ದಿನಾಂಕ: 31.08.2021 ರ ಸಂಜೆ 4.30 ರೊಳಗೆ ಸಲ್ಲಿಸುವುದು. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 01.09.2021ರ ಮಧ್ಯಾಹ್ನ 3 ಘಂಟೆಗೆ ತೆರೆಯಲಾಗುವುದು. ಟೆಂಡರ್‌ನ ಅಂದಾಜು ಮೊತ್ತ ರೂ. 15.95 ಲಕ್ಷಗಳು, ಇ.ಎಂ.ಡಿ ಮೊತ್ತ ರೂ. 79,750/-ಗಳನ್ನು ಕಾರ್ಯನಿರ್ವಹಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಚಟ್ನಿಹಳ್ಳಿ. ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ ಪಡೆದು ಟೆಂಡರ್ ದಸ್ತಾವೇಜು ಜೊತೆಗೆ ಸಲ್ಲಿಸುವುದು. ಷರತ್ತು ಹಾಗೂ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಚಟ್ನಿಹಳ್ಳಿ, ಇವರ ದೂರವಾಣಿ ಸಂಖ್ಯೆ : 9902694461 ಇವರನ್ನು ಸಂಪರ್ಕಿಸುವುದು.
ಸಹಿ/- ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಚಟ್ನಿಹಳ್ಳಿ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ**
ಗೋವಿನಹಾಳ್, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ
ಟೆಂಡರ್ ಸಂಖ್ಯೆ : PACS / SC2/2021-22 Phone : 9902795878
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಗೋವಿನಹಾಳ್ ಕಛೇರಿಗೆ ವಾಣಿಜ್ಯ ಸಂಕೀರ್ಣ ಮಳಿಗೆ ಕಟ್ಟಡದ ನಿರ್ಮಾಣಕ್ಕಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕಾನೂನು ರೀತ್ಯ ನೋಂದಣಿಯಾದ ಎಲ್ಲಾ ದಾಖಲೆಗಳನ್ನು ತಾಂತ್ರಿಕ ಲಕೋಟೆ ಹಾಗೂ ಆರ್ಥಿಕ ಲಕೋಟೆಯಲ್ಲಿಟ್ಟು ಸೀಲ್ಡ್ ಮಾಡಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಗೋವಿನಹಾಳ್, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ. ಇವರಿಗೆ ದಿನಾಂಕ: 31.08.2021 ರ ಸಂಜೆ 4.30 ರೊಳಗೆ ಸಲ್ಲಿಸುವುದು. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 01.09.2021ರ ಮಧ್ಯಾಹ್ನ 3 ಘಂಟೆಗೆ ತೆರೆಯಲಾಗುವುದು. ಟೆಂಡರ್‌ನ ಅಂದಾಜು ಮೊತ್ತ ರೂ. 18.25 ಲಕ್ಷಗಳು, ಇ.ಎಂ.ಡಿ ಮೊತ್ತ ರೂ. 91250/-ಗಳನ್ನು ಕಾರ್ಯನಿರ್ವಹಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಗೋವಿನಹಾಳ್. ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ ಪಡೆದು ಟೆಂಡರ್ ದಸ್ತಾವೇಜು ಜೊತೆಗೆ ಸಲ್ಲಿಸುವುದು. ಷರತ್ತು ಹಾಗೂ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಗೋವಿನಹಾಳ್, ಇವರ ದೂರವಾಣಿ ಸಂಖ್ಯೆ : 9902795878 ಇವರನ್ನು ಸಂಪರ್ಕಿಸುವುದು.
ಸಹಿ/- ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಗೋವಿನಹಾಳ್, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ**
ದೊಡ್ಡೆತ್ತಿನಹಳ್ಳಿ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ
ಟೆಂಡರ್ ಸಂಖ್ಯೆ : PACS / WH2/2021-22 Phone : 9686433380
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ದೊಡ್ಡೆತ್ತಿನಹಳ್ಳಿ ಕಛೇರಿಗೆ ವಾಣಿಜ್ಯ ಸಂಕೀರ್ಣ ಮಳಿಗೆ ಕಟ್ಟಡದ ನಿರ್ಮಾಣಕ್ಕಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಕಾನೂನು ರೀತ್ಯ ನೋಂದಣಿಯಾದ ಎಲ್ಲಾ ದಾಖಲೆಗಳನ್ನು ತಾಂತ್ರಿಕ ಲಕೋಟೆ ಹಾಗೂ ಆರ್ಥಿಕ ಲಕೋಟೆಯಲ್ಲಿಟ್ಟು ಸೀಲ್ಡ್ ಮಾಡಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ದೊಡ್ಡೆತ್ತಿನಹಳ್ಳಿ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ. ಇವರಿಗೆ ದಿನಾಂಕ: 31.08.2021 ರ ಸಂಜೆ 4.30 ರೊಳಗೆ ಸಲ್ಲಿಸುವುದು. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 01.09.2021ರ ಮಧ್ಯಾಹ್ನ 3 ಘಂಟೆಗೆ ತೆರೆಯಲಾಗುವುದು. ಟೆಂಡರ್‌ನ ಅಂದಾಜು ಮೊತ್ತ ರೂ. 27.45 ಲಕ್ಷಗಳು, ಇ.ಎಂ.ಡಿ ಮೊತ್ತ ರೂ. 137250/-ಗಳನ್ನು ಕಾರ್ಯನಿರ್ವಹಣಾಧಿಕಾರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ದೊಡ್ಡೆತ್ತಿನಹಳ್ಳಿ. ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ ಪಡೆದು ಟೆಂಡರ್ ದಸ್ತಾವೇಜು ಜೊತೆಗೆ ಸಲ್ಲಿಸುವುದು. ಷರತ್ತು ಹಾಗೂ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ದೊಡ್ಡೆತ್ತಿನಹಳ್ಳಿ, ಇವರ ದೂರವಾಣಿ ಸಂಖ್ಯೆ : 9686433380 ಇವರನ್ನು ಸಂಪರ್ಕಿಸುವುದು.
ಸಹಿ/- ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ದೊಡ್ಡೆತ್ತಿನಹಳ್ಳಿ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

# ಮಾನವೀಯತೆ ಮೆರೆದ ನ್ಯಾಯಾಧೀಶರು



**ಕಕ್ಷಿದಾರನ ಬಳಿಗೇ ಬಂದು ವ್ಯಾಜ್ಯ ಇತ್ಯರ್ಥಗೊಳಿಸಿದ ನ್ಯಾ.ಆದಿತ್ಯ ಆರ್.ಕಲಾಲ್**

ಮದ್ದೂರು ಆ.25- ಅನಾರೋಗ್ಯದಿಂದ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗದ ಕಕ್ಷಿದಾರರ ಸ್ಥಳಕ್ಕೆ ಧಾವಿಸಿ, ವ್ಯಾಜ್ಯ ಇತ್ಯರ್ಥಗೊಳಿಸುವ ಮೂಲಕ ನ್ಯಾಯಾಧೀಶರಾದ ಆದಿತ್ಯ ಆರ್. ಕಲಾಲ್ ಅವರು ಮಾನವೀಯತೆ ಮೆರೆದ ಪ್ರಸಂಗ ಮಂಡ್ಯ ಜಿಲ್ಲೆಯ ಮದ್ದೂರು ನ್ಯಾಯಾಲಯದಲ್ಲಿ ಜರುಗಿದೆ.

ಮದ್ದೂರಿನ ಕೆ.ಎಚ್.ನಗರದ ನಿವಾಸಿ ಎಸ್.ಸಿದ್ದಲಿಂಗಯ್ಯ ಹಾಗೂ ಗೊರವನಹಳ್ಳಿ ಗ್ರಾಮದ ಜಯರಾಮು ಆತನ ಪುತ್ರ ಕಾಳೇಶ್ ನಡುವೆ ಜಮೀನು ಖರೀದಿ ಕರಾರು ವಿಚಾರದಲ್ಲಿ ವಿವಾದ ಉಂಟಾಗಿತ್ತು. ಈ ಬಗ್ಗೆ ಸಿದ್ದಲಿಂಗಯ್ಯ ತಮ್ಮ ಪರ ವಕೀಲ ಬಿ.ಮಲ್ಲೇಶ್ ಮೂಲಕ ನ್ಯಾಯಾಲಯದಲ್ಲಿ ಕರಾರಿನ ನಿರ್ದಿಷ್ಟ ಅನುಷ್ಠಾನದ ಉಲ್ಲಂಘನೆ ಆರೋಪದ ಮೇಲೆ ಮೊಕದ್ದಮೆ ಹೂಡಿದ್ದರು.

5 ವರ್ಷಗಳ ಕಾಲ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿತ್ತಾದರೂ ಇತ್ಯರ್ಥವಾಗಲಿಲ್ಲ. ಈ ಮಧ್ಯೆ ಸಿದ್ದಲಿಂಗಯ್ಯ ಕಳೆದ ಒಂದು ವರ್ಷದಿಂದ ಪಾರ್ಶ್ವವಾಯು ಪೀಡಿತರಾಗಿ ತಮ್ಮ ಒಂದು ಕಾಲಿನ ಸ್ವಾಧೀನ ಕಳೆದುಕೊಂಡ ಹಿನ್ನೆಲೆಯಲ್ಲಿ ನ್ಯಾಯಾಲದ ವಿಚಾರಣೆಗೆ ಹಾಜರಾಗಲು ಸಾಧ್ಯವಾಗಿರಲಿಲ್ಲ. ಶನಿವಾರ ನಡೆದ ಲೋಕಾ ಅದಾಲತ್ ವೇಳೆ ವಿಚಾರಣೆಗೆ ಹಾಜರಾದರಾದರೂ 2ನೇ ಅಪರ ನ್ಯಾಯಾಲಯ ಮಹಡಿ ಮೇಲಿದ್ದ ಕಾರಣ ಮೆಟ್ಟಿಲು ಹತ್ತಲು ಸಾಧ್ಯವಾಗಿರಲಿಲ್ಲ.

ಈ ಬಗ್ಗೆ ಸಿದ್ದಲಿಂಗಯ್ಯ ಪರ ವಕೀಲ ಮಲ್ಲೇಶ್ ಅವರಿಂದ ವಿಚಾರದ ತಿಳಿದ ನ್ಯಾಯಾಧೀಶರಾದ ಆದಿತ್ಯ ಆರ್.ಕ ಲಾಲ್ ಅವರು ನ್ಯಾಯಾಧೀಶರ ಪೀಠದಿಂದ ಇಳಿದು, ಕಾರಿನಲ್ಲಿ ಕುಳಿತಿದ್ದ ಸಿದ್ದಲಿಂಗಯ್ಯನವರ ಬಳಿ ಬಂದು ಅಹವಾಲು ಆಲಿಸಿದ ನಂತರ, ಉಭಯಸ್ತರ ನಡುವೆ ಮಾತುಕತೆ ನಡೆಸಿ ಜಮೀನು ಖರೀದಿ ಕರಾರು ವಿವಾದವನ್ನು ರಾಜೀ ಸಂಧಾನದ ಮೂಲಕ ಬಗೆ ಹರಿಸಿದರು. ನ್ಯಾಯಾಧೀಶ ಆದಿತ್ಯ ಕಲಾಲ್ ಅವರು ದಾವಣಗೆರೆ ಜಿಲ್ಲೆಯ ಖ್ಯಾತ ವಕೀಲರಾದ ರಾಮಚಂದ್ರ ಕಲಾಲ್ ಅವರ ಪುತ್ರ.

# ಸೆಮಿಸ್ಟರ್ ಪರೀಕ್ಷೆಗಳನ್ನು ರದ್ದುಗೊಳಿಸಲು ಆಗ್ರಹ

**ದಾವಣಗೆರೆ ವಿವಿ ಮುಂದೆ ಎನ್‌ಎಸ್‌ಯುಐ ಪ್ರತಿಭಟನೆ**

ದಾವಣಗೆರೆ, ಆ.25- ಕೋವಿಡ್‌ನಿಂದಾಗಿ ಅನೇಕ ಕಾಲೇಜುಗಳು ಪಠ್ಯವನ್ನು ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ಸೆಮಿಸ್ಟರ್ ಪರೀಕ್ಷೆಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ, ಎನ್‌ಎಸ್‌ಯುಐ ಜಿಲ್ಲಾ ಘಟಕದಿಂದ ಶಿವಗಂಗೋತ್ರಿಯ ದಾವಣಗೆರೆ ವಿಶ್ವ ವಿದ್ಯಾನಿಲಯದ ಆವರಣದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಕೋವಿಡ್ ವೈರಸ್‌ನಿಂದಾಗಿ ವರ್ಷಗಟ್ಟಲೇ ಜನ ಜೀವನ ದುಸ್ತರವಾಗಿದೆ. ಮಹಾಮಾರಿಯಿಂದಾಗಿ ಅನೇಕ ವಿವಿಗಳ ವ್ಯಾಪ್ತಿಯಲ್ಲಿ ಕಾಲೇಜುಗಳು ಪಠ್ಯವನ್ನು ಸರಿಯಾಗಿ ಪೂರ್ಣಗೊಳಿಸಿಲ್ಲ. ಆನ್‌ಲೈನ್ ತರಗತಿಗಳು ಲಾಕ್‌ಡೌನ್ ಅವಧಿಯಲ್ಲಿ ತೆಗೆದುಕೊಂಡಿದ್ದಾರೆ. ಆದರೆ, ನೆಟ್‌ವರ್ಕ್ ಸಮಸ್ಯೆಯಿಂದಾಗಿ ಎಲ್ಲಾ ವಿದ್ಯಾರ್ಥಿಗಳು ನಿರಂತರವಾಗಿ ಆನ್‌ಲೈನ್ ತರಗತಿಗೆ ಹಾಜರಾಗಲು ಸಾಧ್ಯವಾಗಿಲ್ಲ ಎಂದು ಎನ್‌ಎಸ್‌ಯುಐ ಮುಖಂಡ ಶಶಿಧರ್ ಪಾಟೀಲ್ ತಿಳಿಸಿದ್ದಾರೆ.

ಅನೇಕ ವಿದ್ಯಾರ್ಥಿಗಳ ಫಲಿತಾಂಶ ಕಡಿಮೆಯಾಗುತ್ತಿದ್ದು, ಎಲ್ಲಾ ಸೆಮಿಸ್ಟರ್‌ಗಳಲ್ಲಿ ಬ್ಯಾಕ್ ಲಾಕ್‌ಗಳ ವಿಷಯಗಳಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ, ಬ್ಯಾಕ್ ಲಾಗ್‌ಗಳನ್ನು ಕಡಿಮೆ ಮಾಡಲು ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಕೋವಿಡ್‌ನಿಂದಾಗಿ ವಿದ್ಯಾರ್ಥಿಗಳು ಸಾಕಷ್ಟು ತೊಂದರೆ ಎದುರಿಸುತ್ತಿದ್ದು, ದಾವಣಗೆರೆ ವಿಶ್ವ ವಿದ್ಯಾನಿಲಯವು ಬೆಸ ಮತ್ತು ಸಮ ವ್ಯವಸ್ಥೆಯನ್ನು ಮೊದಲು ತೆಗೆದು ಹಾಕುವ ಮೂಲಕ ವಿದ್ಯಾರ್ಥಿಗಳ ಹಿತ ಕಾಯಬೇಕು ಎಂದು ಮನವಿ ಮಾಡಿದರು.

ಎನ್‌ಎಸ್‌ಯುಐ ಮುಖಂಡರಾದ ಹೆಚ್.ಎಂ. ಮನೋಜ್ ಕುಮಾರ್, ಹೆಚ್. ಅಣ್ಣೇಶ್, ಅಮೀನ್‌ಬೀ, ಮೊಹಮ್ಮದ್ ಜುನೇದ್, ಮೊಹಮದ್ ತಬರೇಜ್, ಬಿ. ಕಾರ್ತಿಕ್, ಜಿ. ಮಾಲತೇಶ, ಜೆ .ಗಿರೀಶ, ಪಿ. ವಿಜಯಾನಂದ, ಮೈಲಾರಿ, ಹೆಚ್. ಮಲ್ಲೇಶ ಸೇರಿದಂತೆ ಇತರರು ಇದ್ದರು.

# ದೇವರಮನಿ ದೂಡಾ ಅಧ್ಯಕ್ಷ



ಸಂಸದ ಜಿ.ಎಂ.ಸಿದ್ದೇಶ್ವರ ಅವರ ನಿವಾಸಕ್ಕೆ ತೆರಳಿದ ದೇವರಮನೆ ಶಿವಕುಮಾರ್ ಅವರು ಸಂಸದರಿಗೆ ಸಿಹಿ ತಿನ್ನಿಸುವುದರ ಮೂಲಕ ಕೃತಜ್ಞತೆ ಸಲ್ಲಿಸಿದರು. ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಅಕ್ಕಿ ವರ್ತಕ ಜಯಪ್ರಕಾಶ್ ಮಾಗಿ, ಟಿಂಕರ್ ಮಂಜಣ್ಣ ಮತ್ತಿತರರು ಉಪಸ್ಥಿತರಿದ್ದರು.

**(1ನೇ ಪುಟದಿಂದ)** ದೂಡಾ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ.

ಈ ಸಂದರ್ಭದಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕರುಗಳಾದ ಎಸ್.ಎ. ರವೀಂದ್ರನಾಥ್, ಪ್ರೊ. ಲಿಂಗಣ್ಣ, ಎಸ್.ವಿ. ರಾಮಚಂದ್ರ, ಎಂ.ಪಿ. ರೇಣುಕಾಚಾರ್ಯ, ಮಾಡಾಳು ವಿರೂಪಾಕ್ಷಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತ ರಾವ್ ಜಾಧವ್ ಮತ್ತಿತರರು ಉಪಸ್ಥಿತರಿರಲಿದ್ದಾರೆ.

## ಹರಪನಹಳ್ಳಿ : ಡಿಪ್ಲೋಮಾ ಕೋರ್ಸ್‌ಗಳಿಗೆ ಅರ್ಜಿ

ಹರಪನಹಳ್ಳಿ, ಆ.23 - ಹರಪನಹಳ್ಳಿಯ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಪ್ರಥಮ ಸೆಮಿಸ್ಟರ್ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ ಪಾಸ್ ಅಥವಾ ಫೇಲಾದ, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇದೇ ದಿನಾಂಕ 31ರೊಳಗೆ ಪ್ರವೇಶ ಪಡೆಯಬಹುದು. ಡಿಪ್ಲೋಮಾ ಕೋರ್ಸ್‌ಗಳಾದ ಎಲೆಕ್ಟ್ರಾನಿಕ್ ಅಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್- 63 ಸೀಟ್‌ಗಳು, ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ - 63 ಸೀಟ್‌ಗಳು, ಮೆಕ್ಯಾನಿಕಲ್ ಇಂಜಿನಿಯರಿಂಗ್- 63 ಸೀಟ್‌ಗಳು, ಸಿವಿಲ್ ಇಂಜಿನಿಯರಿಂಗ್- 63 ಸೀಟ್‌ಗಳು ಲಭ್ಯವಿವೆ. ವಿವರಕ್ಕೆ ಗಂಗಾಂಭೆ, ಎಸ್.ಬಿ. ಪ್ರಾಚಾರ್ಯರು (9916552149), ರವಿಕುಮಾರ್ ಎಸ್.ಎಸ್. ರಿಜಿಸ್ಟ್ರಾರ್ (96863 16845), ಕಚೇರಿ ದೂ.ಸಂ. (94485 23484) ಅಥವಾ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆದುಕೊಳ್ಳಬಹುದು.

## ನಮನ ಅಕಾಡೆಮಿಯಿಂದ ವಿನೂತನ ನೃತ್ಯ ಸಂಯೋಜನೆ



ದಾವಣಗೆರೆ, ಆ.25- ನಗರದ ನಮನ ಅಕಾಡೆಮಿ ಭಾರತದ ಕೆಲವು ಪ್ರಸಿದ್ಧ ನದಿಗಳ ಹೆಸರುಗಳ ಮೇಲೆ ರಚಿಸಿದ ಸುಂದರವಾದ ಹಾಡಿಗೆ ಶಾಸ್ತ್ರೀಯ ನೃತ್ಯ ಸಂಯೋಜನೆ ಮಾಡುವ ಮೂಲಕ ವಿನೂತನ ಪ್ರಯೋಗ ಮಾಡಿದ್ದಾರೆ.

ಕೋವಿಡ್ ಹಿನ್ನೆಲೆಯಲ್ಲಿ ನೃತ್ಯ ಪಟುಗಳು ಪ್ರತ್ಯೇಕವಾಗಿ ನೃತ್ಯವನ್ನು ಚಿತ್ರೀಕರಿಸಿ ನಂತರ ಜೋಡಿಸಿ, ನಮನ ಅಕಾಡೆಮಿಯ ಯೂಟ್ಯೂಬ್ ಚಾನಲ್‌ನಲ್ಲಿ ಹರಿಬಿಟ್ಟಿದ್ದಾರೆ. ಆಸಕ್ತರು ನಮನ ಅಕಾಡೆಮಿ ಯೂಟ್ಯೂಬ್ ಚಾನೆಲ್‌ನಲ್ಲಿ ನೃತ್ಯ ವೀಕ್ಷಿಸಬಹುದಾಗಿದೆ. ನೃತ್ಯವನ್ನು ಗುರುಗಳಾದ ಡಿ.ಕೆ. ಮಾಧವಿ ಹಾಗೂ ವಿದ್ಯಾರ್ಥಿಗಳಾದ ರೋಶನಿ ಪ್ರಕಾಶ್, ಟಿ. ಪ್ರಿಯಾ, ಭುವಿ, ಋತು ಹಿರೇಮಠ್ ಪ್ರದರ್ಶಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಮ್‌ಬಿ ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ಸ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್‌ರಸ್ತೆ, ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವುಂಟಾಗಲಿದ.

## ಜನಾಶೀರ್ವಾದ ಯಾತ್ರೆ ನಡೆಸಿದ ಕೇಂದ್ರ ಸಚಿವರ ಮೇಲೆ ಕ್ರಮಕ್ಕೆ ಡಿಬಿ ಆಗ್ರಹ

ದಾವಣಗೆರೆ, ಆ. 25- ಜನಾಶೀರ್ವಾದ ಯಾತ್ರೆಯ ಹೆಸರಿನಲ್ಲಿ ಕೋವಿಡ್ ನಿಯಮ ಉಲ್ಲಂಘಿಸಿರುವ ಕೇಂದ್ರ ಸಚಿವರುಗಳ ಮೇಲೆ ರಾಜ್ಯ ಪೊಲೀಸ್ ಇಲಾಖೆ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಬೇಕು ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವಕ್ತಾರ ಡಿ.ಬಸವರಾಜ್ ಆಗ್ರಹಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವರುಗಳು ಕೋವಿಡ್ ನಿಯಮ ಉಲ್ಲಂಘಿಸಿದ್ದಾರೆ. ಇವರ ಮೇಲೆ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ. ಸಚಿವರಿಗೂ, ಜನಸಾಮಾನ್ಯರಿಗೂ ಈ ನೆಲದ ಕಾನೂನು ಒಂದೇ. ಆದ್ದರಿಂದ ಯಾತ್ರೆ ನಡೆಸಿ ಕೋವಿಡ್ ಉಲ್ಲಂಘಿಸಲು ಕಾರಣರಾದ ಕೇಂದ್ರ ಸಚಿವರುಗಳ ಮೇಲೆ ಕ್ರಮ ಕೈಗೊಳ್ಳಲು ಹೈ ಕೋರ್ಟ್ ನಿರ್ದೇಶನ ನೀಡಬೇಕು ಎಂದು ಹೇಳಿದರು.

ಯಾದಗಿರಿಯಲ್ಲಿ ಮಾಜಿ ಸಚಿವ ಬಾಬೂರಾವ್ ಚಿಂಚನಸೂರು ಬಂದೂಕು ಹಿಡಿದು ರ್‍ಯಾಲಿ ಸಂಘಟಿಸಿದ್ದ ಬಗ್ಗೆ ಪೊಲೀಸರಿಗೆ ಮಾಹಿತಿ ಇದ್ದರೂ ಅವರ ಮೇಲೆ ಪ್ರಕರಣ ದಾಖಲಿಸಿಲ್ಲ. ಆದರೆ 3 ಜನ ಅಮಾಯಕ ಪೊಲೀಸರನ್ನು ಅಮಾನತ್ತು ಮಾಡಿರುವುದು ಖಂಡನೀಯ ಎಂದರು.

ಮೇಕೆದಾಟು ಯೋಜನೆಯನ್ನು ಜಾರಿಗೆ ತರಲು ಕೇಂದ್ರದ ಮೇಲೆ ಒತ್ತಡ ತರಲು ಬಿಜೆಪಿ ಯಾವ ಸಂಸದರು, ಸಚಿವರೂ ಶ್ರಮಿಸುತ್ತಿಲ್ಲ. ಬದಲಾಗಿ ಯಾತ್ರೆಯಲ್ಲಿ ಮುಳುಗಿದ್ದಾರೆ ಎಂದು ಟೀಕಿಸಿದರು.

ಪಾಲಿಕೆ ಸದಸ್ಯ ಕೆ.ಚಮನ್ ಸಾಬ್ ಮಾತನಾಡಿ, ತಾಲಿಬಾನಿಗಳ ಬಗ್ಗೆ ಕೇಂದ್ರ ಸರ್ಕಾರ ಸ್ಪಷ್ಟ ನಿಲುವು ತಾಳಬೇಕು. ಕೇಂದ್ರದ ನಿಲುವನ್ನು ಜನರು ಸ್ವಾಗತಿಸುತ್ತಾರೆ ಎಂದರು.


ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಇನ್‌ಟೆಕ್ ಅಧ್ಯಕ್ಷ ಕೆ.ಎಂ. ಮಂಜುನಾಥ್, ಮುಖಂಡರುಗಳಾದ ಎಂ.ಕೆ. ಲಿಯಾಖತ್ ಅಲಿ, ಮಹಮ್ಮದ್ ಜಿಕ್ರಿಯಾ, ಆರ್.ಬಿ.ಝಡ್ ಬಾಷಾ, ಸುರೇಶ್ ಜಾಧವ್, ಡಿ. ಶಿವಕುಮಾರ್, ಫಾರುಕ್, ಬುಡೇನ್ ಸಾಬ್ ಹಾಗೂ ಇತರರು ಹಾಜರಿದ್ದರು.

### ಯತ್ನಾಳ್ ಅವರನ್ನು ಗಡಿಪಾರು ಮಾಡಲಿ

**ಕಾಂಗ್ರೆಸ್ ನಾಯಕರ ಬಗ್ಗೆ ಅವಾಚ್ಯ ಶಬ್ಧಗಳಿಂದ ಮಾತನಾಡುತ್ತಿರುವ ಶಾಸಕ ಬಸವನಗೌಡ ಪಾಟೀಲ ಯತ್ನಾಳ್ ಅವರನ್ನು ಪೊಲೀಸ್ ಇಲಾಖೆ ಗಡಿಪಾರು ಮಾಡಬೇಕು ಎಂದು ಡಿ.ಬಸವರಾಜ್ ಆಗ್ರಹಿಸಿದರು.**

**ಯತ್ನಾಳ್ ಹಿಂದೆ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಅವರ ಕುಮ್ಮಕ್ಕೂ ಇದೆ ಎಂದು ಅನುಮಾನ ವ್ಯಕ್ತಪಡಿಸಿದ ಅವರು, ಪೊಲೀಸರು ಯತ್ನಾಳ್ ವಿರುದ್ಧ ಸ್ವಯಂ ದೂರು ದಾಖಲಿಸಿಕೊಳ್ಳಬೇಕು. ನ್ಯಾಯಾಲಯವು ಇವರ ನಡವಳಿಕೆ ಗಮನಿಸಿ ಸೂಕ್ತ ಕ್ರಮಕ್ಕೆ ಮಾರ್ಗದರ್ಶನ ನೀಡಲಿ ಎಂದು ಒತ್ತಾಯಿಸಿದರು.**

## ಜನಾಶೀರ್ವಾದ ಯಾತ್ರೆಯಲ್ಲ, ಮೋಸೋತ್ಸವ ಯಾತ್ರೆ



ದಾವಣಗೆರೆ, ಆ.25- ರಾಜ್ಯಾದ್ಯಂತ ಕೇಂದ್ರ ಸಚಿವರು ಮಾಡುತ್ತಿರುವುದು ಜನಾಶೀರ್ವಾದ ಯಾತ್ರೆಯಲ್ಲ, ಬೆಲೆಯೇರಿಕೆಯನ್ನು ಮರೆಮಾಚುವ ಮೋಸೋತ್ಸವ ಯಾತ್ರೆ ಎಂದು ಹಿರಿಯ ಪತ್ರಕರ್ತರೂ ಆದ ಕೆಪಿಸಿಸಿ ಸದಸ್ಯ ಹೆಚ್. ದುಗ್ಗಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೇಂದ್ರದ ನೂತನ ಸಚಿವರಿಂದ ಜನಾಶೀರ್ವಾದ ಯಾತ್ರೆಗೆ ಚಾಲನೆ ದೊರೆತಿದ್ದು, ರಾಜ್ಯದ ನಾಲ್ವರು ಕೇಂದ್ರ ಸಚಿವರಾದ ನಾರಾಯಣಸ್ವಾಮಿ, ರಾಜೀವ್ ಚಂದ್ರಶೇಖರ್, ಶೋಭಾ ಕರಂದ್ಲಾಜೆ, ಭಗವಂತ ಖೂಬಾ ಅವರುಗಳು ತಮ್ಮ ವ್ಯಾಪ್ತಿಯಲ್ಲಿ ಯಾತ್ರೆ ನಡೆಸುತ್ತಿದ್ದಾರೆ. ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ಬಿಜೆಪಿ ಈ ಯಾತ್ರೆ ಹಮ್ಮಿಕೊಂಡಿದೆ. ಆದರೆ, ಜನತೆ ಈಗಾಗಲೇ ಸರ್ಕಾರದ ಮೇಲೆ ವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ ಎಂದು ಕುಟುಕಿದ್ದಾರೆ.


ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ತೊಗರಿಬೇಳೆ, ಅಡುಗೆ ಎಣ್ಣೆ ಎಲ್ಲದರ ಬೆಲೆಯೂ ದಿನದಿನಕ್ಕೆ ಹೆಚ್ಚಾಗುತ್ತಲೇ ಹೋಗುತ್ತಿದ್ದು, ಬಡ ಮತ್ತು ಸಾಮಾನ್ಯ ವರ್ಗದ ಜನತೆ ಬೆಲೆಯೇರಿಕೆಯ ಕಾರಣ ಆರ್ಥಿಕ ಹೊರೆಯಿಂದ ಕುಸಿದು ಹೋಗಿದ್ದಾರೆ. ಜನರಿಗೆ ಮೋಸ ಮಾಡಿರುವ ಬಿಜೆಪಿ ಸರ್ಕಾರ ಮೋಸೋತ್ಸವ ಆಚರಿಸುತ್ತಿದೆ. ಆದ್ದರಿಂದ, ಜನಾಶೀರ್ವಾದ ಯಾತ್ರೆ ಸಫಲವಾಗುವ ಬದಲು ವಿಫಲವಾಗುತ್ತಿದೆ ಎಂದು ಕಿಡಿಕಾರಿದ್ದಾರೆ.

## ರಾಜ್ಯ ಸಮಿತಿ ಅಧ್ಯಕ್ಷರಾಗಿ ಎಚ್.ಜಿ. ಉಮೇಶ್ ಆಯ್ಕೆ, ಇಂದು ಸನ್ಮಾನ

ಎಐಟಿಯುಸಿ ನೇತೃತ್ವದ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘ ಮತ್ತು ಹಿರಿಯ ಮೇಸ್ತ್ರಿಗಳ ಸಹಯೋಗದಲ್ಲಿ ಇಂದು ಬೆಳಿಗ್ಗೆ 12 ಕ್ಕೆ ಪಂಪಾಪತಿ ಭವನದಲ್ಲಿ ರಾಜ್ಯ ಸಮಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಎಚ್.ಜಿ. ಉಮೇಶ್ ಆವರಗೆರೆ ಅವರನ್ನು ಸನ್ಮಾನಿಸಲಾಗುವುದು.

ಅಭಿನಂದನಾ ಕಾರ್ಯಕ್ರಮದಲ್ಲಿ ಹಿರಿಯ ನ್ಯಾಯವಾದಿ ಎಲ್.ಎಚ್. ಅರುಣ್ ಕುಮಾರ್ ಮಾತನಾಡುವರು. ಸಂಘದ ಜಿಲ್ಲಾಧ್ಯಕ್ಷ ಲಕ್ಷ್ಮಣ್ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಎಐಟಿಯುಸಿ ಜಿಲ್ಲಾ ಖಜಾಂಚಿ ಆನಂದರಾಜ್, ಪಿ.ಕೆ. ಲಿಂಗರಾಜ್, ಭೀಮಾರೆಡ್ಡಿ, ಮಾಬುಸಾಬ್, ಭಕ್ಷಿಸಾಬ್, ಮುರುಗೇಶ್, ಜಿ.ಆರ್. ನಾಗರಾಜ್ ಇತರರು ಉಪಸ್ಥಿತರಿರುವರು ಎಂದು ಕಟ್ಟಡ ಕಾರ್ಮಿಕರ ಸಂಘಟನೆಯ ಜಿಲ್ಲಾ ಖಜಾಂಚಿ ಯರಗುಂಟೆ ಸುರೇಶ್ ತಿಳಿಸಿದ್ದಾರೆ.

## ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯಿಂದ ಕೋವಿಡ್ ಲಸಿಕೆ



ದಾವಣಗೆರೆ, ಆ.25- ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ವತಿಯಿಂದ ನಗರದ ಪಿಬಿ ರಸ್ತೆಯಲ್ಲಿನ ಬಿಎಸ್ ಎನ್ ಎಲ್ ಕಚೇರಿ ಬಳಿಯ ಭಾರತೀಯ ರೆಡ್‌ಕ್ರಾಸ್ ಭವನದಲ್ಲಿ ಇಂದು ಕೊರೊನಾದ ಮೊದಲ ಹಾಗೂ ಎರಡನೇ ಲಸಿಕೆ ಹಾಕಿಸುವ ಸಾಮಾಜಿಕ ಸೇವಾ ಕಾರ್ಯದ ಮುಖೇನ ಸಾರ್ವಜನಿಕರ ಆರೋಗ್ಯ ಕಾಳಜಿ ಮೆರೆಯಿತು.

ಈ ಲಸಿಕಾ ಶಿಬಿರಕ್ಕೆ ಜನರಿಂದಲೂ ಸಹ ಉತ್ತಮ ಸ್ಪಂದನೆ ವ್ಯಕ್ತವಾಗಿರುವುದಕ್ಕೆ, ಶಿಬಿರ ಹಮ್ಮಿಕೊಂಡಿದ್ದು ಸಾರ್ಥಕವಾಯಿತೆಂಬ ಭಾವವನ್ನು ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ವ್ಯಕ್ತಪಡಿಸಿದೆ.

ಇಂದು 302 ಮಂದಿಗೆ ಕೋವಿಶೀಲ್ಡ್ ಲಸಿಕೆ ಹಾಕಲಾಗಿದೆ. ಗುರುವಾರ ಮತ್ತು ಶುಕ್ರವಾರವೂ ಸಹ ಮೊದಲ ಹಾಗೂ ಎರಡನೇ ಲಸಿಕೆ ಹಾಕಲಾಗುವುದು ಎಂದು ಸೊಸೈಟಿಯವರು ತಿಳಿಸಿದ್ದಾರೆ.

ಈ ಲಸಿಕಾ ಶಿಬಿರದ ವೇಳೆ ಸೊಸೈಟಿಯ ಅಧ್ಯಕ್ಷ ಡಾ. ಎ.ಎಮ್. ಶಿವಕುಮಾರ್, ಉಪಾಧ್ಯಕ್ಷ, ಶಿಬಿರದ ತಂಡದ ನಾಯಕ ಡಿ.ಎಸ್. ಸಿದ್ದಣ್ಣ, ಕಾರ್ಯದರ್ಶಿ ಡಿ.ಎಸ್. ಸಾಗರ್, ಖಜಾಂಚಿ ಅನಿಲ್ ಬಾರಂಗೆಳ್, ನಿರ್ದೇಶಕರುಗಳಾದ ವಸಂತ್ ರಾಜ್, ಡಿ.ಎನ್. ಶಿವಾನಂದ್, ರವೀಂದ್ರನಾಥ್, ಎಸ್.ಜಿ. ನಟರಾಜ್, ವಿನಯ್ ಪಟಾಕಿ, ಕಚೇರಿ ಸಿಬ್ಬಂದಿ ಎಸ್. ಪೂಜಾ, ಡಾ. ವೆಂಕಟೇಶ್ ಸೇರಿದಂತೆ, ಇತರರು ಇದ್ದರು.

# ರೈತರಿಗೊಂದು ಸುವರ್ಣಾವಕಾಶ : ರೈತರಿಂದಲೇ ಬೆಳೆ ಸಮೀಕ್ಷೆ

ದಾವಣಗೆರೆ ಆ.25 - ಬೆಳೆ ಸಮೀಕ್ಷೆ ಯೋಜನೆಯು ಸರ್ಕಾರದ ಮಹತ್ವಾಂಕ್ಷಿ ಯೋಜನೆಯಾಗಿದ್ದು, ರೈತರು ಬೆಳೆದ ಬೆಳೆಗ ಳಿಗೆ ಸರ್ಕಾರದ ಯೋಜನೆಗಳನ್ನು ಪಡೆಯಲು ಬೆಳೆ ಸಮೀಕ್ಷೆ ಅಡಿಯಲ್ಲಿ ನಿಖರವಾಗಿ ಬೆಳೆಯನ್ನು ನಮೂದಿಸುವುದು ಅಗತ್ಯವಾ ಗಿದ್ದು, ರೈತರ ಮುಂಗಾರು ಬೆಳೆ ಸಮೀಕ್ಷೆ 2020-2021 (kharif season far mer crop survey app 2021-22) ಆ್ಯಪನ್ನು ಗೂಗಲ್ ಪ್ಲೇ ಸ್ಟೋರ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಬೆಳೆ ಸಮೀಕ್ಷೆಯ ದತ್ತಾಂಶಗಳನ್ನು ಕೃಷಿ, ರೇಷ್ಮೆ, ತೋಟಗಾರಿಕಾ ಬೆಳೆಗಳ ವಿಸ್ತೀರ್ಣ ಎಣಿಕೆ ಕಾರ್ಯಗಳಲ್ಲಿ, ಬೆಳೆ ವಿಮೆ ಯೋಜನೆಯ ಸರ್ವೆ ನಂಬರ್‌ವಾರು ಬೆಳೆ ಪರಿಶೀಲನೆ ಹಾಗೂ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಸರ್ವೆ ನಂಬರ್ ಆಯ್ಕೆ, ಕನಿಷ್ಠ ಬೆಂಬಲ ಬೆಲೆ ನಿಗದಿ, ಅರ್ಹ ಫಲಾನುಭವಿಗಳನ್ನು ಗುರುತಿಸಲು, ಆರ್.ಟಿ.ಸಿ.ಯಲ್ಲಿ ಬೆಳೆ ವಿವರಗಳ ದಾಖಲು, ಎನ್.ಡಿ.ಆರ್.ಎಫ್ ಅಡಿಯಲ್ಲಿ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಹಾನಿಗೊಳಗಾದ ಬೆಳೆಯ ವಿಸ್ತೀರ್ಣದ ವಿವರ ಹಾಗೂ ಅರ್ಹ ಫಲಾನು ಭವಿಗಳ ಪಟ್ಟಿ ತಯಾರಿಸುವ ಸಂದರ್ಭ ಸೇರಿ ದಂತೆ ವಿವಿಧ ಕಾರ್ಯಗಳಿಗೆ ಬೆಳೆ ಸಮೀಕ್ಷೆಯ ಮಾಹಿತಿಯು ಅತ್ಯಗತ್ಯವಾಗಿರುತ್ತದೆ. ರೈತರು ತಪ್ಪದೇ ತಮ್ಮ ಜಮೀನಿನಲ್ಲಿರುವ ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ ಇತರೆ ಬೆಳೆಗಳ ವಿವರಗಳನ್ನು ದಾಖಲಿಸಬಹುದಾಗಿದೆ. ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ವಿವರಗಳನ್ನು ರೈತರೇ ಖುದ್ದಾಗಿ ಅಥವಾ ಖಾಸಗಿ ನಿವಾಸಿಗಳ ಸಹಾಯ ಪಡೆದು ಬೆಳೆ ಸಮೀಕ್ಷೆ ಮಾಡುವಂತೆ ಸೂಚನೆ ನೀಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು, ಸಹಾಯಕ ತೋಟಗಾರಿಕೆ ಅಧಿಕಾರಿಗಳು, ರೇಷ್ಮೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ಕೂಡ್ಲಿಗಿ : 'ನಮ್ಮ ಕರವೇ' ಜಿಲ್ಲಾಧ್ಯಕ್ಷರಾಗಿ ಮಯೂರ



ಕೂಡ್ಲಿಗಿ, ಆ.22- 'ನಮ್ಮ ಕರ್ನಾಟಕ ರಕ್ಷಣಾ ವೇದಿಕೆ' ಯ ವಿಜಯನಗರ ಜಿಲ್ಲಾಧ್ಯಕ್ಷರಾಗಿ ಕೂಡ್ಲಿಗಿ ಮಂಜುನಾಥ ಮಯೂರ ಅವರನ್ನು ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೆ. ಲಯನ್ ಜಯರಾಜ್ ನಾಯ್ಡು ನೇಮಕ ಮಾಡಿ ಆದೇಶ ಪತ್ರ ನೀಡಿದ್ದಾರೆ.

## ಪಡಿತರ ಚೀಟಿದಾರರಿಗೆ ಇ-ಕೆವೈಸಿ ನೋಂದಾಯಿಸಲು ಕರೆ

ದಾವಣಗೆರೆ, ಆ.25- ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಚಾಲ್ತಿಯಲ್ಲಿರುವ ಅಂತ್ಯೋದಯ ಅನ್ನ ಮತ್ತು ಆದ್ಯತಾ (ಬಿ.ಪಿ.ಎಲ್) ಹಾಗೂ ಆದ್ಯತೇತರ (ಎಪಿಎಲ್) ಪಡಿತರ ಚೀಟಿಗಳಲ್ಲಿ ಸೇರ್ಪಡೆಗೊಂಡಿರುವ ಪ್ರತಿಯೊಬ್ಬ ಸದಸ್ಯರುಗಳ ಗುರುತಿನ ಮರು ನೋಂದಣಿ ಕಾರ್ಯ (ಇ-ಕೆವೈಸಿ) ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಈ ಹಿಂದೆ ಪ್ರಾರಂಭಿಸಲಾಗಿತ್ತು. ಅನೇಕ ಜನರು ಈಗಾಗಲೇ ನ್ಯಾಯಬೆಲೆ ಅಂಗಡಿಗಳಲ್ಲಿ ಇ-ಕೆವೈಸಿ ಕಾರ್ಯ ಮಾಡಿಸಿಕೊಂಡಿರುತ್ತಾರೆ. ಕಾರಣಾಂತರಗಳಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಆನಂತರ ಕೋವಿಡ್-2019 ಕಾರಣದಿಂದ ಈ ಕಾರ್ಯ ಮುಂದೂಡಲಾಗಿತ್ತು.

ಇದೀಗ ಇ-ಕೆವೈಸಿ ಸಂಗ್ರಹಣೆ ಕಾರ್ಯಕ್ರಮವನ್ನು ಪುನರಾರಂಭಿಸಲು ಆದೇಶ ನೀಡಲಾಗಿದ್ದು, ತಾಲ್ಲೂಕಿನಾದ್ಯಂತ ಪಡಿತರ ಚೀಟಿದಾರರು ಬೆರಳಚ್ಚು ನೀಡಿ, ತಮ್ಮ ಗುರುತು ಮರು ನೋಂದಣಿ ಮಾಡಿಸದೇ ಇರುವ ಎಲ್ಲಾ ಸದಸ್ಯರುಗಳ ಇ-ಕೆವೈಸಿ ಸಂಗ್ರಹಣೆ ಕಾರ್ಯವನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಪ್ರಾರಂಭಿಸಲು ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಎಲ್ಲಾ ನ್ಯಾಯಬೆಲೆ ಅಂಗಡಿ ಮಾಲೀಕರುಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ನ್ಯಾಯಬೆಲೆ ಅಂಗಡಿಗಳಲ್ಲಿ ಇ-ಕೆವೈಸಿ ಸಂಗ್ರಹಣೆಯನ್ನು ಬರುವ ಸೆಪ್ಟೆಂಬರ್ 1 ರಿಂದ 10 ರವರೆಗೆ ಸಂಗ್ರಹಿಸಲು ಬಾಕಿ ಉಳಿದಿರುವ ಸದಸ್ಯರುಗಳಿಗೆ ಅಂತಿಮ ಅವಕಾಶ ನೀಡಲಾಗಿದೆ.

ಈ ಅವಧಿಯಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ವಿತರಣೆ ಕಾರ್ಯ ಇರುವುದಿಲ್ಲ ಎಂದು ದಾವಣಗೆರೆ ತಾಲ್ಲೂಕು ತಹಶೀಲ್ದಾರ್ ಬಿ.ಎನ್.ಗಿರೀಶ್ ತಿಳಿಸಿದ್ದಾರೆ.

## ಹೊನ್ನಾಳಿ : ಸಿಇಟಿ ಪರೀಕ್ಷೆಗೆ ಸಕಲ ಸಿದ್ಧತೆ

ಹೊನ್ನಾಳಿ, ಆ.25- ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಇದೇ ದಿನಾಂಕ 28 ಮತ್ತು 29 ರಂದು ಎರಡು ದಿನಗಳ ಕಾಲ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಯಲಿದ್ದು, ಅದಕ್ಕಾಗಿ ಇಲ್ಲಿನ ಟಿ.ಬಿ.ವೃತ್ತದ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲಾ ವಿಭಾಗದಲ್ಲಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಪ್ರಾಂಶುಪಾಲ ಕೆ.ಬಿ. ವೇದಮೂರ್ತಿ ಹೇಳಿದರು.

ದಿನಾಂಕ 28ರ ಶನಿವಾರ ಬೆಳಗ್ಗೆ 10.30 ರಿಂದ 11.50 ರವರೆಗೆ ಜೀವಶಾಸ್ತ್ರ ವಿಷಯ, ಮಧ್ಯಾಹ್ನ 2.30 ರಿಂದ 3.50 ರವರೆಗೆ ಗಣಿತಶಾಸ್ತ್ರ ವಿಷಯ, ದಿನಾಂಕ 29ರ ಭಾನುವಾರ ಬೆಳಗ್ಗೆ 10.30 ರಿಂದ 11.50 ರವರೆಗೆ ಭೌತಶಾಸ್ತ್ರ ವಿಷಯ ಹಾಗೂ ಮಧ್ಯಾಹ್ನ 2.30 ರಿಂದ 3.50 ರವರೆಗೆ ರಸಾಯನಶಾಸ್ತ್ರ ವಿಷಯಗಳ ಪರೀಕ್ಷೆಗಳು ನಡೆಯಲಿವೆ.

492 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದು, ಟಿ.ಬಿ. ವೃತ್ತದ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲಾ ವಿಭಾಗದಲ್ಲಿ 21 ಕೊಠಡಿಗಳನ್ನು ಸಿದ್ಧಗೊಳಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.


## ಪಂಚಮಸಾಲಿ ಪೀಠದಲ್ಲಿ ಸ್ವಾತಂತ್ರ್ಯೋತ್ಸವ

ಹರಿಹರ, ಆ.25- ಪಂಚಮಸಾಲಿ ಪೀಠದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಶ್ರೀ ವಚನಾನಂದ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಬೆಟಗೇರಿಯ ಹೇರೂರು ರಾಜಣ್ಣ ಅವರು ನೆರವೇರಿಸಿದರು. ಪಂಚಮಸಾಲಿ ಸಮಾಜದ ಹರಿಹರ ತಾಲ್ಲೂಕು ಅಧ್ಯಕ್ಷ ಗುಳದಹಳ್ಳಿ ಶೇಖರಪ್ಪ, ಬಂಕಾಪುರದ ಶಿವಯೋಗಿ, ಷಣ್ಮುಖಪ್ಪ, ಶಿವಾನಂದಪ್ಪ, ಗಿರೀಶ್ ಮತ್ತಿತರರು ಹಾಜರಿದ್ದರು.

## ರವಿರಾಜ್ ನಾಗರಾಳಗೆ ಪಿಎಚ್‌ಡಿ ಪದವಿ



ದಾವಣಗೆರೆ, ಆ.25- ನಗರದ ಸಮಾಜಶಾಸ್ತ್ರ ವಿದ್ಯಾರ್ಥಿ ರವಿರಾಜ್ ನಾಗರಾಳ ಮಂಡಿಸಿದ 'ಯುಟಿಲೈಜೇಶನ್ ಆಫ್ ವೆಲ್‌ಫೇರ್ ಸ್ಕೀಮ್ ಇನ್ ಕರ್ನಾಟಕ' ಎ ಸ್ಟಡಿ ಇನ್ ಸೋಶಿಯಾಲಜಿ ಆಫ್ ಸೋಶಿಯಲ್ ಡೆವಲಪ್‌ಮೆಂಟ್' ಸಮಾಜ ವಿಜ್ಞಾನ ಪ್ರಬಂಧಕ್ಕೆ ಧಾರವಾಡ ಕರ್ನಾಟಕ ವಿಶ್ವ ವಿದ್ಯಾನಿಲಯವು ಪಿಎಚ್‌ಡಿ ಪದವಿ ನೀಡಿದೆ. ಕವಿವಿ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಡಾ. ಶುಭಾಶ್‌ಚಂದ್ರ ಸಿ. ನಾಟೀಕರ್ ಮಾರ್ಗದರ್ಶನ ಮಾಡಿದ್ದರು.






## ಬಿಎಸ್‌ಎಫ್ ಮುಖ್ಯಸ್ಥರಾಗಿ ಪಂಕಜ್

ನವದೆಹಲಿ, ಆ. 25 – ಹಿರಿಯ ಐಪಿಎಸ್ ಅಧಿಕಾರಿ ಪಂಕಜ್ ಸಿಂಗ್ ಅವರನ್ನು ಗಡಿ ಭದ್ರತಾ ಪಡೆ (ಬಿ.ಎಸ್.ಎಫ್.) ಪ್ರಧಾನ ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ಅವರ ತಂದೆ ಪ್ರಕಾಶ್ ಸಿಂಗ್ ಅವರು ಮೂರು ದಶಕಗಳ ಹಿಂದೆ ಇದೇ ಹುದ್ದೆಯಲ್ಲಿದ್ದರು. 1988ರ ರಾಜಸ್ಥಾನ ತಂಡದ ಐಪಿಎಸ್ ಅಧಿಕಾರಿಯಾಗಿರುವ ಪಂಕಜ್ ಸಿಂಗ್, ಆಗಸ್ಟ್ 31ರಂದು ಬಿಎಸ್‌ಎಫ್ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಪ್ರಸಕ್ತ ಅವರು ದೆಹಲಿಯಲ್ಲಿರುವ ಬಿಎಸ್‌ಎಫ್ ಕೇಂದ್ರ ಕಚೇರಿಯಲ್ಲಿ ವಿಶೇಷ ಪ್ರಧಾನ ನಿರ್ದೇಶಕರಾಗಿದ್ದಾರೆ.

## ಸಾಹಿತಿ ಪೈಜ್ನಟ್ರಾಜ್‌ಗೆ ಕಾವ್ಯ ಪ್ರಶಸ್ತಿ




ಸಂತೆಬೆನ್ನೂರು, ಆ.25- ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ಶಿಕ್ಷಕ ಹಾಗೂ ಸಾಹಿತಿ ಪೈಜ್ನಟ್ರಾಜ್ ಅವರಿಗೆ 2021ರ ಗವಿಸಿದ್ದ ಎನ್.ಬಳ್ಳಾರಿ ಕಾವ್ಯ ಪ್ರಶಸ್ತಿ ಲಭಿಸಿದೆ.

ಪ್ರತಿವರ್ಷವು ರಾಜ್ಯಮಟ್ಟದಲ್ಲಿ ಕಾವ್ಯದ ಹಸ್ತಪ್ರತಿಗೆ ಕೊಡಮಾಡುವ ಈ ಕಾವ್ಯ ಪ್ರಶಸ್ತಿಯು ಈ ವರ್ಷ ಪೈಜ್ನಟ್ರಾಜ್ ಅವರ 'ಮತ್ತೆ - ಮತ್ತೆ ಹೇಗೆ ಹಾಡಲಿ' ಎಂಬ ಹಸ್ತ ಪ್ರತಿಗೆ ದೊರೆತಿದೆ. ಪ್ರಶಸ್ತಿಯು 5 ಸಾವಿರ ರೂ. ನಗದು ಮತ್ತು ಫಲಕವನ್ನು ಒಳಗೊಂಡಿದೆ.

# ದೂಡಾ ನಿವೇಶನ ಅರ್ಜಿ : ಬಡವರನ್ನು ದಾರಿ ತಪ್ಪಿಸುವ ಕೆಲಸ

ದಾವಣಗೆರೆ, ಆ.25- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ದಿಂದ ನಿವೇಶನಕ್ಕಾಗಿ ಸಮೀಕ್ಷೆ ದೃಷ್ಟಿಯಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ನಿವೇಶನ ರಹಿತ ಸಾವಿರಾರು ಕುಟುಂಬಗಳು ಮಾಹಿತಿ ಕೊರತೆಯಿಂದ ಉಚಿತ ನಿವೇಶನ ಎಂದು ಅರ್ಜಿ ಸಲ್ಲಿಸುತ್ತಿದ್ದಾರೆ ಎಂದು ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ದೂರಿದ್ದಾರೆ.

ಕೋವಿಡ್ 3ನೇ ಅಲೆ ಮುನ್ಸೂಚನೆ ಇದ್ದರೂ ಸಹ, ದೂಡಾ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಾವಿರಾರು ಜನರು ಮಾಸ್ಕ್ ಇಲ್ಲದೇ ಪರಸ್ಪರ ಅಂತರ ಕಾಪಾಡಿಕೊಳ್ಳದೇ ಅರ್ಜಿ ಪಡೆಯಲು ಪ್ರತಿ ದಿನ ಕೂಲಿ ಮಾಡಿ ಜೀವನ ನಡೆಸುವ ಜನರು ಕೆಲಸಕ್ಕೆ ರಜೆ ಹಾಕಿ ಬೆಳಗಿನಿಂದಲೇ ಸರತಿ ಸಾಲಿನಲ್ಲಿ ನಿಂತು ಅರ್ಜಿ ಸಲ್ಲಿಸಲು ಹರಸಾಹಸ ಪಡುತ್ತಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ನಾಗರಾಜ್ ತಿಳಿಸಿದ್ದಾರೆ.



ದೂಡಾ ಅಧಿಕಾರಿಗಳು ಅರ್ಜಿ ಸಲ್ಲಿಸಲು ಬರುವ ಜನರಿಗೆ ಸರಿಯಾದ ಮಾಹಿತಿ ನೀಡಿದರೆ ಈ ಸಮಸ್ಯೆ ಉಲ್ಬಣವಾಗುವುದಿಲ್ಲ. ಆದರೆ ಪ್ರಾಧಿಕಾರದವರು ಅರ್ಜಿಗೆ 100 ರೂ. ಹಾಗೂ ನೋಂದಣಿಗೆಂದು 1 ಸಾವಿರದಿಂದ 2 ಸಾವಿರದವರೆಗೂ ಹಣ ಕಟ್ಟಿಸಿಕೊಳ್ಳುವ ಹಣದ ದಾಹಕ್ಕೆ ಜನತೆ ಬಲಿಪಶುವಾಗುತ್ತಿದ್ದಾರೆ.

ಈಗ ಕೊರೊನಾ ಮಹಾಮಾರಿ ತಂದುಕೊಳ್ಳುವುದರ ಜೊತೆಗೆ ಮುಂದಿನ ದಿನಗಳಲ್ಲಿ ಅರ್ಜಿ ಸಲ್ಲಿಸಿದವರು ಅಭಿವೃದ್ಧಿಪಡಿಸಿದ ನಿವೇಶನ ವಿಲೇವಾರಿಗೆ ಮತ್ತೆ ಅರ್ಜಿ ಸಲ್ಲಿಸಬೇಕಿದೆ. ಇದು ಬಡವರನ್ನು ದಾರಿ ತಪ್ಪಿಸುವ ಕೆಲಸವಾಗಿದ್ದು, ಜಿಲ್ಲಾಧಿಕಾರಿಗಳು ಈ ಕೂಡಲೇ ಮಧ್ಯೆ ಪ್ರವೇಶಿಸಿ ಬಡವರಿಗೆ ಜಾಗೃತಿ ಮೂಡಿಸುವ ಕೆಲಸ ಮಾಡುವಂತೆ ದೂಡಾಕ್ಕೆ ಸೂಚಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

1999-2004ರ ಶಾಮನೂರು ಮಲ್ಲಿಕಾರ್ಜುನ್ ಅವರು ಮಂತ್ರಿಯಾಗಿದ್ದ ಅವಧಿಯಲ್ಲಿ ಸುಮಾರು 15 ಸಾವಿರಕ್ಕೂ ಹೆಚ್ಚು ನಿವೇಶನ ರಹಿತ ಕುಟುಂಬಗಳನ್ನು ಗುರುತಿಸಿ ಆಶ್ರಯ ಮನೆಗಳನ್ನು ನೀಡಲಾಗಿತ್ತು. ಅಂದಿನಿಂದ ಇಂದಿನವರೆಗೂ ನಿವೇಶನ ರಹಿತರಿಗೆ ಮನೆ ನಿರ್ಮಿಸಿಲ್ಲ. ಇದರಿಂದ ನಿವೇಶನ ರಹಿತ ಕುಟುಂಬಗಳು ಹೆಚ್ಚಾಗಿವೆ. ಇವರಿಗೆ ನಿವೇಶನ ನೀಡುವುದು ಸರ್ಕಾರದ ಕರ್ತವ್ಯ. ಆದರೆ ಸರ್ಕಾರದ ಅಂಗ ಸಂಸ್ಥೆಯಾಗಿರುವ ದೂಡಾ ಜನರಿಗೆ ಸರಿಯಾದ ಮಾಹಿತಿ ನೀಡದೆ ಅರ್ಜಿಗಳನ್ನು ಪಡೆಯುತ್ತಿರುವುದಕ್ಕೆ ನಾಗರಾಜ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ಮಹಾನಗರ ಪಾಲಿಕೆ ಸದಸ್ಯರುಗಳಾದ ಕೆ. ಚಮನ್‌ಸಾಬ್, ಗಡಿಗುಡಾಳ್ ಮಂಜುನಾಥ್, ಆಶಾ ಉಮೇಶ್, ಮೀನಾಕ್ಷಿ ಜಗದೀಶ್, ಯುವರಾಜ್ ಮತ್ತಿತರರಿದ್ದರು

## ವಿ.ವಿ.ಗಳಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ

ದಾವಣಗೆರೆ, ಆ.25- ಭಾರತ ಸರ್ಕಾರವು ಹೊಸದಾಗಿ ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕರ್ನಾಟಕದ ಉನ್ನತ ಶಿಕ್ಷಣ ವ್ಯಾಪ್ತಿಯ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ದಿನಾಂಕ 23 ರಂದು ಜಾರಿಗೊಳಿಸಲಾಗಿದೆ.

ಈ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ನಿಯಮಗಳನ್ನು 2021-22 ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯದ ವ್ಯಾಪ್ತಿಯ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿನ ಎಲ್ಲಾ ಸಂಲಗ್ನಗೊಂಡ ಕಾಲೇಜುಗಳು, ಸ್ವಾಯತ್ತ ಕಾಲೇಜುಗಳು ಮತ್ತು ಘಟಕ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

2021-22 ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆಗಳನ್ನು ಆ.23 ರಿಂದ ಪ್ರಾರಂಭಿಸಿ ಸೆ. 30 ರೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಅ.1 ರಿಂದ ಶೈಕ್ಷಣಿಕ ವರ್ಷದ ತರಗತಿಗಳು ಪ್ರಾರಂಭಗೊಳ್ಳಲಿವೆ ಎಂದು ದಾವಣಗೆರೆ ವಿವಿ ಕುಲಸಚಿವರು ತಿಳಿಸಿದ್ದಾರೆ.

# ಹರಪನಹಳ್ಳಿ ತಾಲ್ಲೂಕಿಗೆ 16 ಕೋಟಿ ರೂ. ಮಂಜೂರು

### ಶಾಸಕ ಕರುಣಾಕರ ರೆಡ್ಡಿ

ಹರಪನಹಳ್ಳಿ, ಆ.25- ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಹರಪನಹಳ್ಳಿ ತಾಲ್ಲೂಕಿಗೆ 16 ಕೋಟಿ ರೂ. ಮಂಜೂರಾಗಿದೆ ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.

ತಾಲ್ಲೂಕಿನ ಹುಣಿಸಿಹಳ್ಳಿಯಲ್ಲಿ 1.9 ಕೋಟಿ ರೂ. ಸಿಸಿ ರಸ್ತೆ, ಅರೆಮಜ್ಜಿಗೇರಿಯಲ್ಲಿ 1ಕೋಟಿ ರೂ. ವೆಚ್ಚದಲ್ಲಿ ಸಿಸಿ ರಸ್ತೆ. ಪಟ್ಟಣದ ಜೆ.ಸಿ. ವೃತ್ತದಿಂದ ತಾಯಮ್ಮನ ಹುಣಸೆಮರದವರೆಗೆ 1.5 ಕೋಟಿ ರೂ. ವೆಚ್ಚದಲ್ಲಿ ಸಿ.ಸಿ ರಸ್ತೆ, ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 6 ಕೊಠಡಿಗಳಿಗೆ 1ಕೋಟಿ ರೂ. ವೆಚ್ಚದಲ್ಲಿ ಭೂಮಿ ಪೂಜೆ, ಪಟ್ಟಣದ ಹಮಾಲರಿಗೆ ಆಹಾರ ಕಿಟ್ ಹಾಗೂ ತಾಲ್ಲೂಕಿನ ಯಡಿಹಳ್ಳಿ ಮತ್ತು ನೀಲ ಗುಂದ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ವಿವಿಧ ಹಳ್ಳಿಗಳ ಕಟ್ಟಡ ಕಾರ್ಮಿಕರಿಗೆ ಆಹಾರ ಕಿಟ್ ವಿತರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.



ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಮಂಜೂರಾದ 16 ಕೋಟಿ ರೂಪಾಯಿ ಹಣದಲ್ಲಿ ಶಾಲಾ ಕೊಠಡಿಗಳು. ವಸತಿ ನಿಲಯಗಳು, ಡಾಂಬರ್ ರಸ್ತೆ, ಸಿಸಿ ರಸ್ತೆಗಳು ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಶೀಘ್ರದಲ್ಲಿ ಟೆಂಡರ್ ಕರೆಯಲಾಗುವುದು ಎಂದರು.

ಕೊರೊನಾ 3 ನೇ ಅಲೆ ನಿಭಾಯಿಸಲು 73 ಲಕ್ಷ ಹಣ ಮಂಜೂರಾಗಿದ್ದು, ಅದರಲ್ಲಿ ಆಸ್ಪತ್ರೆಗೆ ಬೇಕಾದ 10 ಐಸಿಯು, ಮಕ್ಕಳ ಹಾಸಿಗೆ, ವೆಂಟಿ ಲೇಟರ್, ಇಸಿಜಿ, ಮಲ್ಟಿ ಟ್ರಿಪ್ ಸೇರಿದಂತೆ ವಿವಿಧ ವೈದ್ಯಕೀಯ ಸಾಮಗ್ರಿಗಳನ್ನು ಖರೀದಿಸಲು ಸೂಚಿಸಲಾಗಿದೆ ಎಂದರು.

ತಾಲ್ಲೂಕಿನ ಬಹು ನಿರೀಕ್ಷಿತ ಗರ್ಭಗುಡಿ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ ಪ್ರಗತಿ ಹಂತದಲ್ಲಿದ್ದು, ನದಿ ತುಂಬಿರುವುದರಿಂದ ಸ್ಥಗಿತಗೊಂಡಿದೆ. ನದಿ ನೀರು ಕಡಿಮೆಯಾದ ಕೂಡಲೇ ಪುನಃ ಆರಂಭವಾಗುತ್ತದೆ ಎಂದ ಅವರು, ತಾಲ್ಲೂಕಿನ ಕೆರೆಗಳಿಗೆ ತುಂಗಭದ್ರಾ ನದಿ ನೀರು ತುಂಬಿಸುವ ಕಾರ್ಯದಲ್ಲಿ ಪೈಪ್‌ಲೈನ್ ಕೆಲಸವಾಗಿದೆ. ಗುತ್ತಿಗೆದಾರರಾದ ಎಲ್ ಅಂಡ್ ಟಿ ಕಂಪನಿಯವರು ಎಲ್ಲಿ ಇದ್ದಾರೆ ಎಂಬುದೇ ಗೊತ್ತಿಲ್ಲ ಎಂದು ಅವರು ಹೇಳಿದರು.

ಪುರಸಭಾ ಅಧ್ಯಕ್ಷ ಮಂಜುನಾಥ ಇಜಂತಕರ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ಪುರಸಭೆ ಸದಸ್ಯರುಗಳಾದ ಕಿರಣ್‌ಕುಮಾರ್ ಶಾನಭೋಗ, ತಾರಾ ಹನುಮಂತಪ್ಪ, ದ್ಯಾಮಜ್ಜಿ ರೊಕ್ಕಪ್ಪ, ಮುಖಂಡರಾದ ಶಿರಗನಹಳ್ಳಿ ವಿಶ್ವನಾಥ್, ಎಂ.ಪಿ. ನಾಯ್ಕ್, ಮೆಡಿಕಲ್ ಶಾಪ್ ತಿಮ್ಮಣ್ಣ, ಗುಂಡಿ ಮಂಜುನಾಥ, ರಾಘವೇಂದ್ರ ಶೆಟ್ಟಿ, ಎಂ. ಸಂತೋಷ್, ಯು.ಪಿ.ನಾಗರಾಜ, ಸಿಪಿಐ ನಾಗರಾಜ ಎಂ. ಕಮ್ಮಾರ, ಪಿಎಸ್ಐ ಪ್ರಕಾಶ್, ಪುರಸಭಾ ಮುಖ್ಯಾಧಿಕಾರಿ ಯರಗುಡಿ ಶಿವಕುಮಾರ್, ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಡಾ. ಎಂ.ಕೆ. ದುರುಗಪ್ಪ ಇನ್ನಿತರರಿದ್ದರು.

## ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ

ಮೈಸೂರು, ಆ. 25 - ಇಲ್ಲಿನ ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದ ಉತ್ತರ ಪ್ರದೇಶದ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಚಾಮುಂಡಿ ಬೆಟ್ಟಕ್ಕೆ ಗೆಳೆಯನ ಜೊತೆ ತೆರಳಿ ವಾಪಸ್ಸಾಗುತ್ತಿದ್ದ ಮಹಿಳೆಯ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ತಂಡ ಮೊದಲು ಹಣ ಕೇಳಿತ್ತು. ಆದರೆ, ಹಣ ಸಿಗದೇ ಇದ್ದಾಗ ಗೆಳೆಯನ ಮೇಲೆ ಹಲ್ಲೆ ನಡೆಸಿ, ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ದೂರಿನ ಆಧಾರದ ಮೇಲೆ ಅಜ್ಞಾತ ವ್ಯಕ್ತಿಗಳ ಮೇಲೆ ದೂರು ದಾಖಲಿಸಿಕೊಳ್ಳಲಾಗಿದೆ.

ಘಟನೆಯ ಬಗ್ಗೆ ದೆಹಲಿಯಲ್ಲಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ದುಷ್ಕರ್ಮಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಿರುವುದಾಗಿ ಹೇಳಿದ್ದಾರೆ.

## ಜಿಲ್ಲೆಯಲ್ಲಿ 11 ಪಾಸಿಟಿವ್ 3 ಗುಣ

ದಾವಣಗೆರೆ, ಆ.25- ಜಿಲ್ಲೆಯಲ್ಲಿ ಬುಧವಾರ 11 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 3 ಜನ ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 7, ಹರಿಹರ 2, ಹಾಗೂ ಚನ್ನಗಿರಿ ತಾಲ್ಲೂಕಿನಲ್ಲಿ ಇಬ್ಬರಿಗೆ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 232 ಸಕ್ರಿಯ ಪ್ರಕರಣಗಳಿವೆ.

## ಬಸಾಪುರದಲ್ಲಿ ಸರ್ಕಾರಿ ಶಾಲೆಯ ಕಟ್ಟಡಗಳ ಕಾಮಗಾರಿಗೆ ಗುದ್ದಲಿ ಪೂಜೆ



ದಾವಣಗೆರೆ, ಆ.25- ಪ್ರತಿಯೊಬ್ಬರಿಗೂ ತಾವು ಒಂದು ನೂತನ ಮನೆ ಕಟ್ಟಿಸಬೇಕೆಂಬ ಮಹದಾಸೆ ಇದ್ದೇ ಇರುತ್ತದೆ. ಅಂತಹ ಸಂದರ್ಭ ಬಂದಾಗ ಮನೆಯ ಗುದ್ದಲಿ ಪೂಜೆ ಕಾರ್ಯಕ್ರಮವನ್ನು ಮನೆಯ ಸದಸ್ಯರು ಯಾವ ರೀತಿ ಸಂಭ್ರಮಿಸುತ್ತಿದ್ದರೋ ಅದಕ್ಕಿಂತ ಹೆಚ್ಚಿನ ರೀತಿ ಮಹಾನಗರ ಪಾಲಿಕೆ ವ್ಯಾಪ್ತಿಯ ಬಸಾಪುರದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡಗಳ ಕಾಮಗಾರಿಯ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಆ ಶಾಲೆಯ ಶಿಕ್ಷಕರು ಸಂಭ್ರಮಿಸಿದ್ದು ಕಂಡು ಬಂತು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಶಿಫಾರಸ್ಸಿನ ಮೇರೆಗೆ ಸ್ಮಾರ್ಟ್ ಸಿಟಿ ಯೋಜನೆ ಯಡಿ ಆರು ಶಾಲಾ ಕಟ್ಟಡಗಳಿಗೆ ಅನುದಾನ ದೊರೆತಿದ್ದು, ಇಂದು ಕಟ್ಟಡಗಳ ಗುದ್ದಲಿ ಪೂಜೆ ಕಾರ್ಯ ನಡೆಯಿತು.

ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ ಸಂತೋಷ್ ಕುಮಾರ್ ಅವರು ತಾವೇ ಅರ್ಚಕರಾಗಿ ಶಾಸ್ತ್ರ ಬದ್ಧವಾಗಿ ಪೂಜೆ ನೆರವೇರಿಸಿದರು. ಶಾಲೆಯ ಶಿಕ್ಷಕಿಯರು ಸಂಭ್ರಮದಿಂದ ಗ್ರಾಮದ ಮುಖಂಡರಿಗೆ ಕಂಕಣ ಕಟ್ಟುವ ಮೂಲಕ ಸ್ವಾಗತಸಿದ್ದು ವಿಶೇಷವಾಗಿತ್ತು.

ಭೂಮಿ ಪೂಜೆಯ ಈ ವಿಶೇಷ ಸಮಾರಂಭದಲ್ಲಿ ಹಿರಿಯ ಪತ್ರಕರ್ತರೂ ಆದ ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಬಾ.ಮ.ಬಸವರಾಜಯ್ಯ, ಎಸ್‌ಡಿಎಂಸಿ ಅಧ್ಯಕ್ಷ ಪ್ರಕಾಶ್, ಮಾಜಿ ನಗರಾಭಿವೃದ್ಧಿ ಸದಸ್ಯ ಎಂ. ಎಸ್. ಕೊಟ್ರಯ್ಯ, ಕೆಪಿಸಿಸಿ ಸಾಮಾಜಿಕ ಜಾಲತಾಣದ ರಾಜ್ಯ ಕಾರ್ಯದರ್ಶಿ ಕೆ.ಎಲ್.ಹರೀಶ್, ಗ್ರಾಮದ ಮುಖಂಡರುಗಳಾದ ಸಿ.ಮಹೇಶ್ವರಪ್ಪ, ನಾಗೇಂದ್ರಚಾರ್, ಎನ್.ಎಂ.ಕೊಟ್ರಯ್ಯ, ಬಿ.ಕೆ. ದೇವೇಂದ್ರಪ್ಪ, ಕೆ.ಬಿ. ಲಿಂಗರಾಜ್, ಕೆ.ಬಿ.ಪ್ರಕಾಶ್ ಭಾಗವಹಿಸಿ ನೆರವೇರಿಸಿದರು.

ಹಾದಿಮನಿ ಶಿವಕುಮಾರ್, ಬಿ.ಟಿ. ಮರುಳಸಿದ್ದಪ್ಪ, ಎಚ್. ಎಂ.ಲೋಕೇಶ್ವರಯ್ಯ, ದಲಿತ ಮುಖಂಡ ಹನುಮಂತಪ್ಪ, ಸ್ಮಾರ್ಟ್ ಸಿಟಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ರಾದ ಶಿವರಾಜ್, ಸಹಾಯಕ ಅಭಿಯಂತರರಾದ ವೀರೇಶ್, ಅನೂಪ್ ಸೇರಿದಂತೆ ಗ್ರಾಮದ ಪ್ರಮುಖರು ಭಾಗಿಗಳಾಗಿದ್ದರು.

## ಜೂಜಾಟದ ವೆಬ್‌ತಾಣ ತಡೆಯಲು ಕೇಂದ್ರಕ್ಕೆ ಅಧಿಕಾರವಿಲ್ಲ

### ರಾಜ್ಯಗಳೇ ಕ್ರಮ ತೆಗೆದುಕೊಳ್ಳಬೇಕೆಂದು ಹೈಕೋರ್ಟ್ ಎದುರು ಅರ್ಜಿ


ನವದೆಹಲಿ, ಆ. 25 - ಆನ್‌ಲೈನ್ ಜೂಜಾಟದ ವೆಬ್ ತಾಣಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದು ರಾಜ್ಯ ಸರ್ಕಾರಗಳ ಹೊಣೆ ಎಂದಿರುವ ಕೇಂದ್ರ ಸರ್ಕಾರ, ಈ ವಿಷಯದಲ್ಲಿ ಕೇಂದ್ರ ಎಲೆಕ್ಟ್ರಾನಿಕ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ಯಾವುದೇ ಅಧಿಕಾರವಿಲ್ಲ ಎಂದು ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಾಟೀಲ್ ಹಾಗೂ ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರನ್ನು ಒಳಗೊಂಡ ಪೀಠದ ಎದುರು ಅರ್ಜಿ ದಾಖಲಿಸಿರುವ ಕೇಂದ್ರ ಸರ್ಕಾರ, ಆನ್‌ಲೈನ್ ಜೂಜಾಟದ ವೆಬ್ ತಾಣಗಳನ್ನು ಮುಚ್ಚುವಂತೆ ಆದೇಶ ಹೊರಡಿಸಲು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ನೇರ ಅಧಿಕಾರ ಇಲ್ಲ ಎಂದು ತಿಳಿಸಿದೆ.

ಜೂಜು ಹಾಗೂ ಬೆಟ್ಟಿಂಗ್‌ನಲ್ಲಿ ತೊಡಗುವ ವೆಬ್ ತಾಣಗಳನ್ನು ಮುಚ್ಚುವಂತೆ ದಾಖಲಾದ ಅರ್ಜಿಯ ವಿಚಾರಣೆ ನಡೆಸುತ್ತಿದ್ದ ನ್ಯಾಯಾಲಯದ ಎದುರು ಕೇಂದ್ರ ಸರ್ಕಾರ ತನ್ನ ನಿಲುವು ತಿಳಿಸಿದೆ.

ಆನ್‌ಲೈನ್ ಜೂಜಾಟ ಅಪಾಯಕಾರಿ ಎಂದಿರುವ ನ್ಯಾಯಾಲಯ, ಯುವಕರನ್ನು ಬದಿಗೊತ್ತಿ ವೆಬ್ ತಾಣಗಳು ಹಣ ಗಳಿಸಲು ಬಿಡಲಾಗದು ಎಂದು ಹೇಳಿದೆ. ನ್ಯಾಯಾಲಯ ವಿಚಾರಣೆಯನ್ನು ಅಕ್ಟೋಬರ್ 11ಕ್ಕೆ ಮುಂದೂಡಿದೆ.

ಹಲವಾರು ರಾಜ್ಯಗಳು ಜೂಜಾಟ ನಿಷೇಧಿಸಿವೆ. ಆದರೂ, ದೊಡ್ಡ ಸಂಖ್ಯೆಯಲ್ಲಿ ವೆಬ್ ತಾಣಗಳು ಜೂಜಾಟ ಹಾಗೂ ಬೆಟ್ಟಿಂಗ್‌ಗೆ ಅವಕಾಶ ನೀಡುತ್ತಿವೆ ಎಂದು ಅವಿನಾಶ್ ಮೆಹ್ರೋತ್ರ ಎಂಬುವವರು ಅರ್ಜಿ ದಾಖಲಿಸಿದ್ದರು.



## ಗಿಡ ನೆಟ್ಟು ಸಂರಕ್ಷಣೆ ಮಾಡಲು ಕರೆ

ದಾವಣಗೆರೆ, ಆ.25- ಜಿಲ್ಲೆಯಾದ್ಯಂತ ಎಲ್ಲಿಯಾದರೂ ತಮ್ಮ ಮನೆಯ ಮುಂದೆ ಅಥವಾ ರಸ್ತೆ ಬದಿಯಲ್ಲಿ ಗಿಡಗಳನ್ನು ನೆಟ್ಟು ಸಂರಕ್ಷಣೆ ಮಾಡುವ ಆಸಕ್ತಿ ಇರುವವರು ಇದ್ದರೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಂಪರ್ಕಿಸಿದರೆ ಗಿಡಗಳನ್ನು ಹಾಕಿ ಕೊಡಲಾಗುತ್ತದೆ ಎಂದು ಟ್ರಸ್ಟ್ ತಿಳಿಸಿದೆ.

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ದೇವರಾಜ ಅರಸು ಬಡಾವಣೆ ಸುತ್ತಮುತ್ತ ಸಾಮಾಜಿಕ ವಲಯ ಅರಣ್ಯಾಧಿಕಾರಿ ಬರ್ಕತ್ ಅಲಿ, ಅಗಡಿ ಮಹಾಂತೇಶ್, ಬಸವ ಬಳಗದ ವೀಣಾ ಮಂಜುನಾಥ್, ವಕೀಲರಾದ ಸುಧಾ, ತುಕಾರಾಮಪ್ಪ, ಸಮಾಜ ಸೇವಕರಾದ ವನಜಾ ಮಹಾಲಿಂಗಯ್ಯ, ಮಂಜುಳಮ್ಮ, ವಿ.ಟಿ. ಮಂಜುನಾಥ್ ಅವರ ಸಹಕಾರದೊಂದಿಗೆ ಗಿಡಗಳನ್ನು ನಡೆಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಲಿಂಗರಾಜು (95380-24422), ಸದಾನಂದ (63631-51534) ಅವರನ್ನು ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಕೋವಿಡ್ ಲಸಿಕೆ

ರೋಟರಿ ಕ್ಲಬ್, ಇನ್ನರ್‌ವೀಲ್ ಕ್ಲಬ್ ವಿದ್ಯಾನಗರದಿಂದ ಇಂದು ಕೋವಿಡ್ ಲಸಿಕೆ ಹಾಕಲಾಗುವುದು ಎಂದು ಅಧ್ಯಕ್ಷ ಹೆಚ್. ಆಂಜನೇಯಮೂರ್ತಿ (9448668165), ಮಾಜಿ ಅಧ್ಯಕ್ಷ ಎಂ.ಬಿ. ಚಂದ್ರಪ್ಪ (9964057162), ಜಂಟಿ ಕಾರ್ಯದರ್ಶಿ ಎ.ಜೆ. ರವಿಕುಮಾರ್ (8892988989) ತಿಳಿಸಿದ್ದಾರೆ.

### ಹೆಬ್ಬಾಳು ಗೌಡ್ರ ಹೆಚ್.ಪಿ. ಶಿವಲಿಂಗಪ್ಪ ನಿಧನ



ದಾವಣಗೆರೆ ತಾಲ್ಲೂಕು ಹೆಬ್ಬಾಳು ಗ್ರಾಮದ ಬೆಂಗಳೂರು ವಾಸಿ

**ಹೆಚ್.ಪಿ. ಶಿವಲಿಂಗಪ್ಪ**

ಇವರು ದಿನಾಂಕ 24.8.2021ರ ಮಂಗಳವಾರ ಸಂಜೆ 6.05ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.8.2021ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ಹೆಬ್ಬಾಳು ಗ್ರಾಮದಲ್ಲಿ ನೆರವೇರಲಿದೆ.

-ದುಃಖತಪ್ತ ಕುಟುಂಬ ವರ್ಗ

ಮೊ. 7795451295, 98453-08091






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte